MADAM SPEAKER.—There is ample scope for the Hon'ble Member to discuss the matter at a later stage. Let us take the next item on the agenda.

Now we shall take up further discussion on the Resolution moved by Sri T. R. Shamanna.

## Mysore Land Reformes (Second Amendment and Miscellaneous Provision) Bill 1972

### (*i*) Statutory Resolution to disallow Mysore Ordinance No. 1 of 1972

### (*ii*) Motion to Consider the Bill.

ಶ್ರೀ ಟಿ. ಆರ್. ಶಾಮಣ್ಣ (ಕೋಚೆ).—ಮಾನ್ಯ ಅಧ್ಯಕ್ಷಣಿಯವರೇ, ಈ ದಿನ ಮೈಸೂರು ರಾಜ್ಯ.....

† Sri C. M. ARMUGAM.—The measure brought forward by the Government is a progressive one. This legislation is going to help thousands of people. I request Sri Shamanna through you Madam Speaker, to withdraw his amendment. The Government could not implement the provisions of the Bill because of the adoption of an amendment moved by the Opposition in the Legislative Council. Let us not put obstacles in the way of the Government in getting the Bill passed once again. Let it not appear to the Government or the Ruling Party that the Opposition is putting obstacles in the passage of the Bill. I only request Sri Shamanna to please withdraw his amendment. The amendment proposed by Sri Shamanna is of a conservative type. I am not going to be a party to his amendment. We must accept the progressive measure brought forward by the Government, and we must allow the Government to implement it. On behalf of the entire Opposition I appeal to Sri Shamanna to withdraw his amendment.

Sri D. DEVARAJ URS.—I join with Sri C. M. Armugam in his pleadings with Sri Shamanna to withdraw his amendment.

Sri C. M. ARUMUGAM.—Inspite of my pleadings, if Sri Shamanna were to go on with his speech, I will have to perform the unpleasant task of opposing his amendment. I do not want to be a party to such an amendment.

† Sri T. R. SHAMANNA.—I will not come in the way of Sri Armugam either to support my amendment or to reject it.

ಈ ದಿನ ಸಭೆಯ ಮುಂದೆ ನಾನು ತಂದಿರತಕ್ಕ ನಿರ್ಣಯ, ಮೈಸೂರು ರಾಜ್ಯದ ರಾಜ್ಯ ಪಾಲರು 1972ನೆಯ ಇಸವಿ ಮೇ 10ರಂದು ಹೊರಡಿಸಿರುವ 1972ನೇ ಇಸವಿಯ 1ನೇ ಕ್ರಮಾಂಕದ ಅದ್ಯಾದೇಶವನ್ನು ಅಂದರೆ ಮೈಸೂರು ರಾಜ್ಯದ ಭೂಸುಧಾರಣಾ ತಿದ್ದುಪಡಿ ಹಾಗೂ ವಿವಿಧ ಬಾಬುಗಳಿಗೆ ಸಂಬಂಧಿಸಿದ ಅದ್ಯಾದೇಶಕ್ಕೆ ಈ ಸಭೆ ಅಸಮಾಧಾನವನ್ನು ಸೂಚಿಸುತ್ತದೆ ಎಂಬುದು. ಅದನ್ನು ಸಮರ್ಥಿಸುತ್ತಾ ಎರಡು ಮಾತುಗಳನ್ನು ಆಡುವುದಕ್ಕೆ ತಾವು ಅವಕಾಶ ಕೊಟ್ಟಿರುವುದ

ಕ್ಕಾಗಿ ನನ್ನ ವಂದನೆಯನ್ನು ಮಾನ್ಯ ಅಧ್ಯಕ್ಷಣಿಯವರಿಗೆ ಸಲ್ಲಿಸುತ್ತೇನೆ. ಈ ಸಭೆಯು ಮೇಲ್ಕಂಡ ಬಿಲ್ಲಿಗೆ ಹೆಚ್ಚು ಕಡಿಮೆ ಸರ್ವಾನುಮತದಿಂದ ಒಪ್ಪಿಗೆ ನೀಡಿತ್ತು. ಒಪ್ಪಿಗೆಯನ್ನು ನೀಡಿದಾಗ ಸಂಸ್ಥಾ ಕಾಂಗ್ರೆಸ್ಸಿನ ಸದಸ್ಯರು ಅದಕ್ಕೆ ಯಾವ ವಿಧವಾದ ಅಡಚಣೆಯನ್ನು ತರದೆ ತಮ್ಮ ಸರ್ವ ಸಮ್ಮತಿ ಯನ್ನು ಕೊಟ್ಟಿದ್ದರು. ಕೆಳಮನೆಯಲ್ಲಿ ಅದಕ್ಕೆ ಒಪ್ಪಿಗೆಯನ್ನು ಕೊಟ್ಟಿದ್ದರೂ ಕೂಡ ಮೇಲ್ಮನೆಯಲ್ಲಿ ಅದರ ಪಕ್ಷದ ಸದಸ್ಯರು ಯಾವ ಒಂದು ಕಾರಣದಿಂದ ಇದಕ್ಕೆ ಅಡ್ಡಿ ತರುವ ರೀತಿಯಲ್ಲಿ ಕಾರ್ಯ ಮಾಡಿದರು ಅನ್ನುವುದು ಅರ್ಥವಾಗದೆ ಇದ್ದಂಥ ಮಾತು.

ನನಗೆ ಅರ್ಥವಾಗುವ ಹಾಗೆ ಈ ಮೇಲ್ಮನೆಯಲ್ಲಿ ನಮಗೆ ಬಹುಮತ ಇದೆಯೆಂದು ಪ್ರಕಟಣೆ ಮಾಡುವುದಕ್ಕೋಸ್ಕರ ಅಥವಾ ಇದರ ಬಗ್ಗೆ ಆವರ ಪಾರ್ಟಿಯಲ್ಲಿ ಒಂದು ಒಮ್ಮತವಾದ ಚರ್ಚೆ ಮಾಡದೆ ಅವಸರವಾದ ತೀರ್ಮಾನವನ್ನು ತೆಗೆದುಕೊಂಡು ಮಾಡಿದರೋ ಏನೋ ನನಗೆ ತಿಳಿಯದು. ಆದರೂ ಕೂಡ ಈ ಸುಗ್ರೀವಾಜ್ಞೆ ಬಗ್ಗೆ ನನಗೆ ವಿರೋಧವಿಲ್ಲದಿದ್ದರೂ ಕೂಡ ಅದರ ಔಚಿತ್ಯದ ಬಗ್ಗೆ ಮತ್ತು ಅವಶ್ಯಕತೆ ಬಗ್ಗೆ ಈ ನಿರ್ಣಯವನ್ನು ತರಬೇಕಾಗಿ ಬಂತು. ಇದರಲ್ಲಿ ನನ್ನ ಮುಖ್ಯವಾದಂಥ ಒಂದು ವಿವರಣೆ ಏನೆಂದರೆ ಈ ಸಭೆ ಅಡ್ಜರ್ನ್ ಮಾಡಿ ಕೆಲವೇ ದಿವಸಗಳಲ್ಲಿ ಮತ್ತೆ ಸೇರುವ ಅವಕಾಶ ಇದ್ದರೂ ಕೂಡ ಈ ಆರ್ಡಿನೆನ್ಸ್‌ನ್ನು ಹೊರಡಿಸತಕ್ಕಂಥ ಅವಶ್ಯಕತೆ ಏನು ಇತ್ತು ಎನ್ನುವುದನ್ನು ಒತ್ತಿ ಹೇಳಬೇಕಾಗಿದೆ. ಈಗ ಈ ಆರ್ಡಿನೆನ್ಸ್‌ನ್ನು ಹೊರಡಿಸಿದ್ದರಿಂದ ಹೆಚ್ಚಿನ ಏನು ಅನುಕೂಲ ವಾಯಿತು ಎನ್ನುವುದು ನನಗೆ ಅರ್ಥವಾಗುತ್ತಾ ಇಲ್ಲ. ಅಲ್ಲದೆ ಮುಂದೆ ಸಮಗ್ರವಾದ ಬಿಲ್ ಬರುವುದೂ ಇತ್ತು. ಈ ಆರ್ಡಿನೆನ್ಸ್ ಹೊರಡಿಸಿದ್ದು 1ನೇ ತಾರೀಖು ಮೇ ತಿಂಗಳಲ್ಲಿ. ಈಗ ಈ ಸಭೆ ಸೇರಿರತಕ್ಕಂಥಾದ್ದು 19ನೇ ಜೂನ್‌ನಲ್ಲಿ. ಈ ಒಂದು ತಿಂಗಳಿನಲ್ಲಿ ಯಾರೂ ಕೂಡ ಭೂಮಾ ಲೀಕ ಗೇಣಿದಾರನಿಗೆ ಕೊಡಬೇಕಾದ ಜಪಿಗೆಯನ್ನು ನ್ಯಾಯವಾದ ರೀತಿಯಲ್ಲಿ ತಪ್ಪಿಸಿಕೊಳ್ಳುವುದಕ್ಕೆ ಸಾಧ್ಯ ಇರುತ್ತಿರಲಿಲ್ಲ. ಆದರೆ ನಾನು ತಿಳಿದುಕೊಂಡಿರುವುದು ಈ ಆರ್ಡಿನೆನ್ಸ್‌ನ್ನು ಹೊರಡಿಸಿದ ಉದ್ದೇಶ ಇಷ್ಟೆ. ಇದನ್ನು ಒಂದು ಪ್ರೆಸ್ಟೀಜ್‌ನಿಂದ ಹೊರಡಿಸಿದ್ದಾರೆಯೇ ಏನಃ ಮತ್ತೇನೂ ಇಲ್ಲ. ಇದರಲ್ಲಿ ನನ್ನ ಮುಖ್ಯವಾದ ಆರೋಪ ಏನೆಂದರೆ ಈ ಭೂಸುಧಾರಣೆ ಬಗ್ಗೆ ಶೀಘ್ರವಾಗಿ, ಸಮಗ್ರ ವಾದಂಥ ಒಂದು ಬಿಲ್ಲನ್ನು ಈ ಸಭೆಯ ಮುಂದೆ ಇಡುತ್ತೇವೆ ಎಂದು ರೆವಿನ್ಯೂ ಮಂತ್ರಿಗಳು ಮತ್ತು ಮುಖ್ಯ ಮಂತ್ರಿಗಳು ಹೇಳುತ್ತಲೇ ಬಂದಿದ್ದಾರೆ. ಈ ರೀತಿ ಒಂದು ಸಮಗ್ರವಾದ ಬಿಲ್ಲು ಈ ಸಭೆಯ ಮುಂದೆ ಬರುವಾಗ ಈ ಆರ್ಡಿನೆನ್ಸ್‌ನ್ನು ತರಬೇಕಾದ ಅವಶ್ಯಕತೆ ಏನಿತ್ತು? ಆರ್ಡಿನೆನ್ಸ್‌ನ್ನು ರೆಗ್ಯುಲರೈಸ್ ಮಾಡಲು ತಂದಿರುವ ಈ ಬಿಲ್ಲಿಗೆ ಬದಲು ಸಮಗ್ರವಾದ ಒಂದು ಬಿಲ್ಲನ್ನೇ ನಮ್ಮ ಮುಂದೆ ಇಟ್ಟುಬಿಟ್ಟಿದ್ದರೆ ಚೆನ್ನಾಗಿತ್ತು. ಭೂಸುಧಾರಣೆಗೆ ಸಂಬಂಧಪಟ್ಟ ಬಿಲ್ಲುಗಳು ಚಿಲ್ಲರೆ ಚಿಲ್ಲರೆಯಾಗಿ ನಮ್ಮ ಮುಂದೆ ಬರುತ್ತಾ ಇದ್ದರೆ ಒಂದು ಸಮಗ್ರವಾದ ಬಿಲ್ಲು ಬರಬೇಕಾದರೆ ತಡ ವಾಗುತ್ತದೆ ಎನ್ನುವುದೇ ನನ್ನ ಆರೋಪ. ಇನ್ನು 15-20 ದಿವಸದಲ್ಲಿ ಈ ಅಸೆಂಬ್ಲಿ ಸೇರುವ ಸಂದರ್ಭ ಇರುವಾಗ ಈ ಆರ್ಡಿನೆನ್ಸ್ ತರುವ ಅವಶ್ಯಕತೆ ಇರಲಿಲ್ಲ. ನಾನು ಆರ್ಡಿನೆನ್ಸ್‌ನ್ನು ವಿರೋಧ ಮಾಡುತ್ತಾ ಇಲ್ಲ. ಅದರ ಉದ್ದೇಶವನ್ನು ವಿರೋಧಿಸುತ್ತೇನೆ. ಇದನ್ನು ಒಂದು ಪ್ರೆಸ್ಟಿಜ್‌ನಿಂದ ತಂದಿದ್ದಾರೆಯೇ ಏನಃ ಮತ್ತೇನೂ ಇಲ್ಲ. It is more a question of prestige rather than giving benefit to those who are in need of it. ಎನ್ನತಕ್ಕಂಥಾದ್ದು ನನ್ನ ಆರೋಪಣೆ. ಈವೊತ್ತಿನ ದಿವಸ ಈ ಆರ್ಡಿನೆನ್ಸ್‌ನ್ನು ರೀಪ್ಲೇಸ್ ಮಾಡು ವುದಕ್ಕೆ ಈ ಬಿಲ್ಲನ್ನು ತಂದಿದ್ದೀರಿ. ಈ ಆರ್ಡಿನೆನ್ಸ್‌ನ್ನು ಹೊರಡಿಸದೇ ಇದ್ದಿದ್ದರೆ 15 ದಿವಸದಲ್ಲಿ ಯಾವುದೂ ಕೂಡ ತಲೆಕೆಳಗು ಆಗುತ್ತಿರಲಿಲ್ಲ. ಏತಕ್ಕೆಂದರೆ ಮುಂದೆ ಲ್ಯಾಂಡ್ ರೀಫಾರಂಸ್ ಬಗ್ಗೆ ಒಂದು ಸಮಗ್ರವಾದ ಬಿಲ್ಲು ಬರುವುದರಿಂದ ಅದರಲ್ಲಿ ರೆಟ್ರಾಸ್ಪೆಕ್ಟ್ ಎಫೆಕ್ಟ್ ಕೊಡಬೇಕು ಎನ್ನುವುದು ಇದೆ. ಆದುದರಿಂದ ಈ ರೀತಿ ಒಂದು ಆರ್ಡಿನೆನ್ಸ್‌ನ್ನು ತರಬಾರದಾಗಿತ್ತು. ಅದನ್ನು ತಮ್ಮ ಒಂದು ಪ್ರತಿಷ್ಠೆಯಿಂದ ತಂದಿದ್ದೀರೆಯೇ ಏನಃ ಅಂಥಾ ಪ್ರತಿಫಲ ಇದ್ದಂತೆ ಏನೂ ಕಾಣಲಿಲ್ಲ. ಸಮಗ್ರ ಬಿಲ್ಲನ್ನು ಈ ಅಧಿವೇಶನದ ಮುಂದೆ ಇಟ್ಟು ಮೇಲ್ಮನೆಗೆ ಕಳುಹಿಸಬಹುದಾಗಿತ್ತು. ಅದಕ್ಕೆ ಸಾಕಾ ಡಷ್ಟು ಕಾಲವೂ ಕೂಡ ಇತ್ತು. ಸರ್ಕಾರದವರು ಏನಾದರೂ ಒಂದು ಆರ್ಡಿನೆನ್ಸ್‌ನ್ನು ಹೊರಡಿಸ ಬೇಕಾದರೆ ಜನತೆಯ ಅವಶ್ಯಕತೆಗಳಿಗನುಸಾರವಾಗಿ ಇಷ್ಟೂ ಮಾಡಬೇಕೇ ಏನಃ ತಮ್ಮ ಪ್ರತಿಷ್ಠೆ ಯನ್ನು ಉಳಿಸಿಕೊಳ್ಳುವುದಕ್ಕೆ ಈ ರೀತಿ ಮಾಡಬಾರದು ಎಂದು ಒತ್ತಾಯ ಮಾಡಿ ಹೇಳುತ್ತೇನೆ. ಮತ್ತು ತಮ್ಮ ಪ್ರತಿಷ್ಠೆಯನ್ನು ಪುಷ್ಟೀಕರಿಸುವುದಕ್ಕೆ ಈ ಆರ್ಡಿನೆನ್ಸ್‌ನ್ನು ಹೊರಡಿಸಿದ್ದಾರೆ ಎಂದು ನಾವು ತಿಳಿದುಕೊಳ್ಳಬೇಕಾಗುತ್ತದೆ. ಆದುದರಿಂದ ನಾನು ಸರ್ಕಾರದ ಗಮನವನ್ನು ಸೆಳೆಯು ವುದು ಇಷ್ಟೆ. ಈ ಆರ್ಡಿನೆನ್ಸ್‌ನ್ನು ಉದ್ದೇಶಪೂರ್ವಕವಾಗಿಯೇ ಹೊರಡಿಸಿದ್ದಾರೆ ಎಂದು ತಿಳಿಸಿ, ನನ್ನ ಎರಡು ಮಾತುಗಳನ್ನು ಹೇಳಿ, ನನ್ನ ಈ ರೆಸಲ್ಯೂಷನ್‌ನನ್ನು ಒತ್ತಾಯಪಡಿಸುವುದಿಲ್ಲ ಎಂದು ನಾನು ತಿಳಿಸುತ್ತೇನೆ.

ಶ್ರೀ ಟಿ. ಎಂ. ಮಂಜುನಾಥ್ (ತಿಪಟೂರು).—ನನ್ಮಾನ್ಯ ಅಧ್ಯಕ್ಷರೇ, ಆರ್ಡಿನೆನ್ಸ್ ಹೊರಡಿಸಿರುವ ಉದ್ದೇಶ ಸಂಸ್ಥಾ ಕಾಂಗ್ರೆಸ್‌ನವರು ಕೆಳಮನೆಯಲ್ಲಿ ಒಪ್ಪಿಗೆ ಕೊಟ್ಟಂಥ ಬಿಲ್ಲಿಗೆ ಮೇಲ್ಮನೆಯಲ್ಲಿ ಅಡ್ಡಿಮಾಡಿದರು ಎನ್ನುವ ಉದ್ದೇಶಕ್ಕಾಗಿ. ಶ್ರೀಮಾನ್ ಶಾಮಣ್ಣನವರು ಹೇಳಿದ ಅಭಿಪ್ರಾಯದ ಹಾಗೆ ಚಿಲ್ಲರೆ ಚಿಲ್ಲರೆಯಾಗಿ ಬಿಲ್ಲನ್ನು ತಂದು ಜನಗಳ ಮನಸ್ಸಿನ ಮೇಲೆ ಅನೇಕ ವಿಧವಾದ ಭಾವನೆಗಳು ಬರುವ ಹಾಗೆ ಮಾಡಬಾರದು ಎಂದು ನನ್ನ ಅಭಿಪ್ರಾಯವೂ ಕೂಡ ಆಗಿದೆ. ತಮ್ಮ ಮನಸ್ಸಿನಲ್ಲಿ ಸಮಗ್ರವಾದ ಬಿಲ್ಲನ್ನು ತರಬೇಕು ಎನ್ನುವ ಉದ್ದೇಶ ಇದ್ದಿದ್ದರೆ ಈ ರೀತಿ ಆರ್ಡಿನೆನ್ಸ್ ತರಬೇಕಾದ ಅವಶ್ಯಕತೆ ಇರಲಿಲ್ಲ. ಒಂದು ಸಮಗ್ರವಾದ ಬಿಲ್ಲನ್ನು ತರಲಿ ನಾವೆಲ್ಲಾ ಒಟ್ಟಾರೆ ಅದನ್ನು ಅವಿರೋಧವಾಗಿ ಪಾಸು ಮಾಡಬಹುದು ಎನ್ನುವ ಉದ್ದೇಶದಿಂದ ನಮ್ಮ ಪಕ್ಷದ ಸದಸ್ಯರು ವಿರೋಧ ಮಾಡಿದ್ದರು. ಇನ್ನು ಯಾವ ತರದ ಉದ್ದೇಶದಿಂದಲೂ ಇದನ್ನು ಅಡಚಣೆ ಮಾಡಬೇಕು ಎನ್ನುವ ಅಭಿಪ್ರಾಯ ಇರಲಿಲ್ಲ. ಸರ್ಕಾರದವರು ಯಾವುದೇ ಬಿಲ್ಲನ್ನು ತರಬೇಕಾದರೂ ಚಿಲ್ಲರೆ ಚಿಲ್ಲರೆಯಾಗಿ ತರುವ ಬದಲು ಒಂದು ಸಮಗ್ರವಾದ ಬಿಲ್ಲನ್ನು ತಂದಿದ್ದರೆ ಅದಕ್ಕೆ ಯಾವ ರೀತಿಯಾಗಿಯೂ ಅಡಚಣೆ ಇರಲಿಲ್ಲವೆಂದು ಈ ಸಭೆಯ ಗಮನಕ್ಕೆ ತರಲಿಚ್ಛೆ ಪಡುತ್ತೇನೆ.

ಶ್ರೀ ಬಿ. ಏ. ಕಕ್ಕರಾಯ (ಬಂಟ್ವಾಳ).—ಅಧ್ಯಕ್ಷರೇ, ಶ್ರೀಮಾನ್ ಶಾಮಣ್ಣನವರು ತಂದ ಈ ರೆಸಲ್ಯೂಷನ್ ಬಗ್ಗೆ ಅವರು ಏನೊಂದು ಭಾಷಣ ಮಾಡಿದರೋ ಅದನ್ನು ಕುತೂಹಲದಿಂದ ಕೇಳಿದೆ. ಏತಕ್ಕೆಂದರೆ ಶ್ರೀಮಾನ್ ಶಾಮಣ್ಣನವರು ಈ ಸಭೆಗೆ ಆರಿಸಲ್ಪಟ್ಟಾಗ ಕ್ರಾಂತಿಕಾರಿಗಳಲ್ಲಿ ಕ್ರಾಂತಿಕಾರಿಗಳೆಂದು ಹೇಳಿಕೊಳ್ಳುತ್ತಿರುವ ಮಾರ್ಕ್ಸಿಸ್ಟ್ ಕಮ್ಯುನಿಸ್ಟ್ ಪಾರ್ಟಿಯವರು ಶಾಮಣ್ಣನವರಿಗೆ ತಮ್ಮ ಬೆಂಬಲವಿತ್ತೆಂದು ಹೇಳಿಕೊಂಡರು. ಆ ವಿಚಾರದ ಬಗ್ಗೆ ಅವರ ಪ್ರತಿಕ್ರಿಯೆಯು ಕೂಡ ಜಾಹಿರ ಮಾಡಿದ. ಈಗ ಶಾಮಣ್ಣನವರು ಕೊಟ್ಟಂಥ ರೆಸಲ್ಯೂಷನ್ ನೋಡಿದಾಗ ನನಗೆ ಆಶ್ಚರ್ಯವೂ ದುಃಖವೂ ಆಗುತ್ತದೆ. ಅವರು ಹಿಂದೆ ಹೇಳಿದಂಥ ಕೆಲವು ಮಾತುಗಳು ಜ್ಞಾಪಕಕ್ಕೆ ಬರುತ್ತವೆ. ಈ ಸಭೆಯಲ್ಲಿ ಗೇಣಿದಾರರ ರಕ್ಷಣೆ ಬಗ್ಗೆ ಮಸೂದೆ ಮಂಡಿಸಲ್ಪಟ್ಟಾಗ ಶಾಮಣ್ಣನವರಲ್ಲದೆ ಬೇರೆ ಯಾರೂ ಅದನ್ನು ಏಷ್ಟೊಂದು ವಿರೋಧಿಸಲಿಲ್ಲ ಎಂದು ನನಗೆ ಕಾಣುತ್ತದೆ. ಒಂದನೆಯದಾಗಿ ಗೇಣಿದಾರರಿಗೆ ಗೇಣಿ ಕಡಿದು ಆಗಬಾರದೆಂದೂ, ಎರಡನೆಯದಾಗಿ ಗೇಣಿದಾರನಿಂದ ಭೂಮಾಲಕನಿಗೆ ಜಮೀನು ಬಿಡಿಸಿಕೊಡಬೇಕೆಂದೂ, ಮೂರನೆಯದಾಗಿ ಗೇಣಿದಾರನಿಂದ ಯಾರು ಭೂಮಿಯನ್ನು ಬಿಡಿಸಿಕೊಂಡಿರುತ್ತಾರೋ ಅವರಿಗೆ ಸಜಾ ಅಥವಾ ದಂಡ ವಿಧಿಸಬೇಕೆಂಬ ಸೂಚನೆಯನ್ನು ಕೈಬಿಡಬೇಕೆಂದೂ ಅವರು ವಾದಿಸಿದ್ದರು.

4–30 P.M.

ಅದಕ್ಕೆ ಯಾರೂ ಕೂಡ ಈ ಸಭೆಯಲ್ಲಿ ಬೆಂಬಲ ಕೊಡಲಿಲ್ಲ. ಕೊನೆಗೆ ಅವರು ಅದನ್ನು ಹಿಂತೆಗೆದುಕೊಂಡರು ಅಥವಾ ಒತ್ತಾಯಪಡಿಸಲಿಲ್ಲವೆಂದು ನನ್ನ ಜ್ಞಾಪಕ. ಅದೇನೇ ಇರಲಿ, ಈ ಮಸೂದೆ ನರ್ವಾನುಮತದಿಂದ ಈ ಸಭೆಯಲ್ಲಿ ಅಂಗೀಕಾರವಾಯಿತು. ಈ ಶಾಸನದಿಂದ ನಮ್ಮ ರೈತರು ಪಡುತ್ತಿರುವ ಕಷ್ಟಗಳನ್ನು ನಿವಾರಣೆ ಮಾಡುವುದಕ್ಕೆ ಸಂಪೂರ್ಣವಾಗಿ ಸಾಧ್ಯವಾಗುತ್ತದೆ ಎಂದು ನಾನು ತಿಳಿದುಕೊಂಡಿಲ್ಲ. ಈ ಮಸೂದೆಗೆ ನಾನು ಕೂಡ ಕೆಲವು ತಿದ್ದುಪಡಿಗಳನ್ನು ಕೊಟ್ಟಿದ್ದೆ. ನಾನು ಕೊಟ್ಟ ತಿದ್ದುಪಡಿಗಳನ್ನು ಈ ಸಭೆ ಅಂಗೀಕಾರ ಮಾಡಿದ್ದರೆ ಇನ್ನೊಂದು ಸಮಗ್ರವಾದ ಶಾಸನ ಬರುವವರೆಗೂ ರೈತರು ಯಾವುದೇ ಭೀತಿ ಇಲ್ಲದೆ ಸಾಗುವಳಿ ಮಾಡಿಕೊಂಡು ಅವರ ಕೆಲಸಗಳನ್ನು ಮಾಡಿಕೊಂಡು ಹೋಗಲಿಕ್ಕೆ ಅನುಕೂಲವಾಗುತ್ತಿತ್ತು. ಆದರೆ ನನ್ನ ತಿದ್ದುಪಡಿಗಳನ್ನು ಅಂಗೀಕಾರ ಮಾಡಬೇಕು ಎಂದು ಸರ್ಕಾರದವರಿಗೆ ಅನ್ನಿಸಲಿಲ್ಲ, ಅಂಗೀಕಾರ ಮಾಡಲಿಲ್ಲ. ಆದರೂ ಕೂಡ ಆ ಹೊತ್ತು ಇದ್ದ ರೀತಿಯಲ್ಲಿ ಆದರೂ ಮಸೂದೆ ಶಾಸನವಾಗಿ ಜಾರಿಗೆ ಬರುತ್ತದೆ, ಸ್ವಲ್ಪಮಟ್ಟಿಗಾದರೂ ರೈತರಿಗೆ ಪ್ರಯೋಜನವಾಗುತ್ತದೆ ಎನ್ನುವ ಆತ್ಮ ವಿಶ್ವಾಸದಿಂದ ನಾವು ಇಲ್ಲಿಂದ ಹೊರಟೆವು. ನಮ್ಮ ಕ್ಷೇತ್ರಗಳಿಗೆ ಹೋದ ಕೆಲವೇ ದಿವಸಗಳಲ್ಲಿ ಮೇಲ್ಮನೆಯಲ್ಲಿ ಶಾಸನ ಬದ್ದುಹೋಯಿತು, ಅದಕ್ಕೆ ಬಹುಮತ ಬರಲಿಲ್ಲ ಎಂದು ಪತ್ರಿಕೆಗಳಲ್ಲಿ ಓದಿದಾಗ ಆ ರೀತಿ ಆಗುವುದಕ್ಕೆ ಕಾರಣರಾದವರ ಮೇಲೆ ರೈತರು ಕೋಪವನ್ನು ತಾಳಿದರು ಎಂದು ಸಂಕೋಚವಿಲ್ಲದೆ ಹೇಳಲಿಕ್ಕೆ ಬಯಸುತ್ತೇನೆ. ಆ ಶಾಸನವನ್ನು ಅಲ್ಲ ಬದರಾಯಿಸುವುದಕ್ಕೆ ಯಾವ ಮುಖವಾಡವನ್ನು ಇಟ್ಟುಕೊಂಡಿದ್ದರೂ ಕೂಡ ರೈತರು ಅದಕ್ಕೆ ಬಲಿ ಬೀಳಲಿಕ್ಕೆ ತಯಾರಿಲ್ಲ. ಪ್ರಗತಿಶೀಲವಾದ ತಿದ್ದುಪಡಿಗಳ ನೆಪದಲ್ಲಿ ಶಾಸನ ಜಾರಿಗೆ ಬಾರದ ಹಾಗೆ ಮಾಡಿದರು. ನಮ್ಮ ರೈತರು ಎಲ್ಲ ವಿಚಾರಗಳನ್ನೂ ಕೂಡ ಸಾಕಷ್ಟು ತಿಳಿದುಕೊಂಡಿದ್ದಾರೆ. ಆದರ ಹಿಂದೆ ಇದ್ದಂಥ ನಿಜವಾದ ಸಂಗತಿಯನ್ನು ಅವರು ಅರ್ಥ ಮಾಡಿಕೊಂಡಿದ್ದಾರೆ. ಶಾಸನ ಜಾರಿಗೆ ಬರುವುದಕ್ಕೆ ಅಡ್ಡಿ ಮಾಡಿದವರ ಉದ್ದೇಶವೇನು ಎನ್ನುವುದನ್ನು ನಮ್ಮ ರೈತರು ಚೆನ್ನಾಗಿ ತಿಳಿದುಕೊಂಡಿದ್ದಾರೆ.

ಅದೇನೆಂದರೆ, ಕೆಲವು ದಿವಸಗಳಷ್ಟಾಗಾದರೂ, ಒಂದೆರಡು ತಿಂಗಳಷ್ಟಾಗಾದರೂ ಶಾಸನ ಜಾರಿಗೆ ಬಾರದೆ ಇದ್ದರೆ, ಸಾವಿರಾರು ಮಂದಿಯನ್ನಾದರೂ ಒಕ್ಕಲೆಬ್ಬಿಸಬಹುದು, ಜಮೀನಿನಿಂದ ಹೊರದೂಡಬಹುದು ಅಥವಾ ಸಾವಿರಾರು ರೂಪಾಯಿಗಳನ್ನು ಗೇಣಿದಾರರಿಂದ ವಸೂಲು ಮಾಡ ಬಹುದು ಎನ್ನುವ ಉದ್ದೇಶದಿಂದಲೇ, ಅವರಿಗೆ 20 ವರ್ಷಗಳಿಂದ ಅವಕಾಶವನ್ನು ಕೊಟ್ಟಿದ್ದರೂ ಇನ್ನೂ ಐದಾರು ತಿಂಗಳು ಅವಧಿ ಸಿಕ್ಕಲಿ ಎನ್ನುವ ಉದ್ದೇಶದಿಂದ ಶಾಸನ ಜಾರಿಗೆ ಬಾರದಂತೆ ಮಾಡಿದ್ದಾರೆನ್ನುವ ವಿಚಾರಗಳನ್ನು ನಮ್ಮ ರೈತರು ಸಾಕಷ್ಟು ತಿಳಿದುಕೊಂಡಿದ್ದಾರೆ. ಆದುದ ರಿಂದ ಈ ಶಾಸನವನ್ನು ಜಾರಿಗೆ ತಂದು ಅಡ್ಡಿಯಾದವರ ಮೇಲೆ ಅವರ ಪಾಪಕ್ಕೆ ತಕ್ಕ ಪ್ರಾಯಶ್ಚಿತ್ತ ವನ್ನು, ಶಾಸ್ತಿಯನ್ನು ಮಾಡಲಕ್ಕೆ ರೈತರು ಸಿದ್ಧರಾಗಿದ್ದಾರೆಂದು ಹೇಳಲಕ್ಕೆ ನಾನು ಇಚ್ಛೆಪಡು ತ್ತೇನೆ.

ಆ ಶಾಸನ ಜಾರಿಗೆ ಬರಲಿಲ್ಲವಾದ್ದರಿಂದ ಒಂದು ಆರ್ಡಿನೆನ್ಸ್ ಜಾರಿಗೆ ತರಬೇಕು, ಎಂದು ಸರ್ಕಾರದ ಮುಂದೆ ಮನವಿ ಮಾಡಿಕೊಂಡವರಲ್ಲಿ ನಾನೂ ಒಬ್ಬ. ಆ ಸಂದರ್ಭದಲ್ಲಿ ಒಂದು ಸುಗ್ರೀವಾಜ್ಞೆಯನ್ನು ತರುವುದರ ಹೊರತು ಬೇರೆ ಯಾವುದೇ ರೀತಿಯಲ್ಲಿ ರೈತರಿಗೆ ರಕ್ಷಣೆ ಕೊಡುವು ದಕ್ಕೆ ಅವಕಾಶವಿರಲಿಲ್ಲ. ಆಗ ಶಾಸನ ಸಭೆಯು ಅಧಿವೇಶನವಿಲ್ಲದೆ ಇದ್ದುದರಿಂದ ಬೇರೆ ಮಾರ್ಗ ವಿಲ್ಲದೆ ಸರ್ಕಾರದವರು ಒಂದು ಸುಗ್ರೀವಾಜ್ಞೆಯನ್ನು ಹೊರಡಿಸಿ ಇದನ್ನು ಜಾರಿಗೆ ತಂದಿದ್ದಾರೆ. ಅದಕ್ಕಾಗಿ ನಾನು ಸರ್ಕಾರವನ್ನು ಅಭಿನಂದಿಸುತ್ತೇನೆ. ಆದ್ದರಿಂದ ಈ ಸಭೆ ನಮ್ಮ ಮುಂದಿರುವ ಮಸೂದೆಗೆ ಸಂಪೂರ್ಣ ಬೆಂಬಲವನ್ನು ಕೊಡಬೇಕೆಂದು ನಾನು ಎಲ್ಲರಲ್ಲೂ ಕಳಕಳಿಯಿಂದ ವಿನಂತಿ ಮಾಡಿಕೊಳ್ಳುತ್ತೇನೆ.

ಹಿಂದೆ ಇದೇ ಮಸೂದೆ ಸಭೆಯು ಮುಂದೆ ಬಂದಾಗ ನಾನು ಮಂಡಿಸಿದ್ದ ತಿದ್ದುಪಡಿಗಳನ್ನು ಸ್ವಲ್ಪ ಬದಲಾವಣೆ ಮಾಡಿ ಹೊಸ ತಿದ್ದುಪಡಿಗಳನ್ನು ಈಗಲೂ ಕೊಟ್ಟಿದ್ದೇನೆ. ಆ ತಿದ್ದುಪಡಿಗಳನ್ನು ಸಭೆ ಒಪ್ಪಿಕೊಂಡರೆ ಈ ಶಾಸನ ಇನ್ನಷ್ಟು ಪ್ರಯೋಜನಕಾರಿಯಾದೀತು ಎಂದು ಈ ಸಂದರ್ಭದಲ್ಲಿ ಹೇಳಲಕ್ಕೆ ಇಚ್ಛೆಪಡುತ್ತೇನೆ.

ಈ ಶಾಸನವನ್ನು ಈ ಸಭೆ ಅಂಗೀಕಾರ ಮಾಡಿ ನಮ್ಮ ರೈತರಿಗೆ ಒಂದು ಭದ್ರತೆಯನ್ನು ಸಮಗ್ರ ಶಾಸನ ಬರುವ ತನಕ ಕೊಡಬೇಕು. ಹಿಂದೆ ಯಾವ ರೀತಿ ಇದನ್ನು ಸರ್ವಾನುಮತದಿಂದ ಸಭೆ ಅಂಗೀಕಾರ ಮಾಡಿತೋ ಅದೇ ರೀತಿಯಲ್ಲಿ ಈ ಹೊತ್ತು ಕೂಡ ಇದನ್ನು ಸರ್ವಾನುಮತದಿಂದ ಅಂಗೀಕಾರ ಮಾಡುತ್ತಾರೆನ್ನುವ ಭರವಸೆಯನ್ನು ಇಟ್ಟುಕೊಂಡಿದ್ದೇನೆ ಮತ್ತು ಅಂಗೀಕಾರ ಮಾಡ ಬೇಕೆಂದು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ಇನ್ನೊಂದು ವಿಚಾರ ಹೇಳಬೇಕಾದುದೇನೆಂದರೆ, ನಾವು ಇದನ್ನು ಸರ್ವಾನುಮತದಿಂದ ಅಂಗೀಕಾರ ಮಾಡಿದರೂ ಇದು ಪುನಃ ಮೇಲ್ಮನೆಗೆ ಹೋಗಬೇಕು. ಅಲ್ಲಿ ಹೋದಾಗ ಹೋದ ಸರು ಈ ಶಾಸನಕ್ಕೆ ಯಾವ ಅವಸ್ಥೆ ಬಂತೋ ಅದೇ ಗತಿ ಈ ಸಂದರ್ಭದಲ್ಲಿ ಕೂಡ ಬಾರದ ಹಾಗೆ ಏನಾದರೂ ಆಶ್ವಾಸನೆ ಇವೆಯೆಂದು ಹೇಳಲಿಕ್ಕೆ ಬರುವುದಿಲ್ಲ. ಆದುದರಿಂದ ನಮ್ಮ ಸಂಸ್ಥಾ ಕಾಂಗ್ರೆಸ್ ಪಕ್ಷದ ನಾಯಕರು ಈಗಾಗಲೇ ಇಲ್ಲಿ ಹೇಳಿದಹಾಗೆ ಯಾವುದೇ ನೆಪವನ್ನು ಹುಡುಕದೆ ಅಥವಾ ಯಾವುದೇ ತಿದ್ದುಪಡಿಗಳನ್ನು ಕೊಟ್ಟು ಅಂಗೀಕಾರವಾಗದ ಹಾಗೆ ಮಾಡಿ, ಶಾಸನವಾಗಿ, ಹೊರಗೆ ಬರದೆ ಇರುವ ಹಾಗೆ ಮಾಡುವಂಥ ಯಾವುದೇ ತಂತ್ರವನ್ನೂ ಕೈಕೊಳ್ಳದೆ ಈ ಮಸೂದೆಯನ್ನು ಅಂಗೀಕಾರ ಮಾಡುವುದಕ್ಕೆ ಎಲ್ಲ ತರಹ ಸಹಕಾರದ ಮತ್ತು ಸಹಾಯದ ಧೋರಣೆಯನ್ನು ತಾಳಬೇಕು ಎಂದು ಅವರಲ್ಲಿ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ಒಂದು ವೇಳೆ ಅವರು ಇದಕ್ಕೆ ಒಪ್ಪದೆ ಇದ್ದರೆ, ಇಂಥ ಪ್ರಗತಿಶೀಲವಾದ ಶಾಸನವನ್ನು ಜಾರಿಗೆ ತರುವುದಕ್ಕೆ ಮೇಲ್ಮನೆ ಅಡ್ಡಿಯಾಗಿ ಬರುವುದಿದ್ದರೆ, ಮೇಲ್ಮನೆ ಯನ್ನು ರದ್ದುಪಡಿಸುವುದಕ್ಕೆ ಬೇಕಾದ ಕ್ರಮವನ್ನು ಸರ್ಕಾರ ಕೈಕೊಳ್ಳಬೇಕು. ಮೇಲ್ಮನೆಯನ್ನು ರದ್ದು ಮಾಡುವುದರ ಬಗ್ಗೆ ನಾನು ಒಂದು ನಿರ್ಣಯವನ್ನು ಕೂಡ ಕಳುಹಿಸಿದ್ದೇನೆ. ಮೇಲ್ಮನೆಯಲ್ಲಿ ಆಳುವ ಪಕ್ಷದವರಿಗೆ ಬಹುಮತವಿಲ್ಲವೆಂದರೆ ಅದನ್ನು ರದ್ದು ಮಾಡಬೇಕು ಎನ್ನುವ ಯೋಚನೆ ಇದೆ ಎನ್ನುವ ವರದಿ ಬಂದಿದೆ. ಯಾರಿಗಾದರೂ ಬಹುಮತವಿಲ್ಲ ಎನ್ನುವ ಕಾರಣಕ್ಕೆ ರದ್ದು ಮಾಡದೆ, ಪ್ರಗತಿಶೀಲವಾದ ಶಾಸನಗಳು ಜಾರಿಗೆ ಬರುವುದಕ್ಕೆ ಅಡ್ಡಿಯಾಗುವಂಥ ಸಭೆಗಳು ಈ ಹೊತ್ತಿನ ಪ್ರಜಾಪ್ರಭುತ್ವದ ಯುಗದಲ್ಲಿ ಇರಬೇಕಾದ ಅವಶ್ಯಕತೆ ಇಲ್ಲ, ಅದನ್ನು ರದ್ದು ಮಾಡಲು ಬೇಕಾದ ಕಾರ್ಯಕ್ರಮಗಳನ್ನು ಸರ್ಕಾರ ಕೈಗೊಳ್ಳಬೇಕು ಎಂದು ಪ್ರಾರ್ಥನೆ ಮಾಡಿಕೊಂಡು, ಈ ಶಾಸನಕ್ಕೆ ನನ್ನ ಸಂಪೂರ್ಣ ಬೆಂಬಲವನ್ನು ಸೂಚನೆ ಮಾಡುತ್ತೇನೆ.

ಶ್ರೀ ಸಿ. ಬೈರೆಗೌಡ (ರಾಮಗರ).—ಮಾನ್ಯ ಅಧ್ಯಕ್ಷರೇ, ಭಾರತದ ಕಮ್ಯೂನಿಸ್ಟ್ ಪಕ್ಷದ ಸದಸ್ಯರಾದ ಶ್ರೀ ಕಕ್ಕಿಲ್ಲಾಯ ಅವರು ಮಾತನಾಡುತ್ತ ಕಮ್ಯೂನಿಸ್ಟ್ ಮಾರ್ಕ್ಸ್‌ಸ್ಟ್ ಪತ್ರಿಕೆ ಶ್ರೀ ಶಾಮಣ್ಣ ಅವರಿಗೆ ಒಂದು ಜ್ಯೆಟರ್ ಕೊಟ್ಟಿದೆ ಎಂದು ಹೇಳಿದರು. ಆದರೆ ನನಗೆ ಗೊತ್ತಿರುವಷ್ಟು ಮಟ್ಟಿಗೆ ಮಾರ್ಕ್ಸ್‌ವಾದಿ ಕಮ್ಯೂನಿಸ್ಟ್ ಪತ್ರಿಕೆ ಶ್ರೀ ಶಾಮಣ್ಣ ಅವರು ಕ್ರಾಂತಿಕಾರಿಗಳಲ್ಲಿ ಕ್ರಾಂತಿಕಾರಿಗಳು ಎಂದು ಹೇಳಿಲ್ಲ. ಅದನ್ನು ಮಾನ್ಯ ಸದಸ್ಯರಾದ ಕಕ್ಕಿಲ್ಲಾಯ ಅವರು ಗಮನಿಸಬೇಕು ಎಂದು ತಮ್ಮ ಮೂಲಕ ವಿನಂತಿಸಿಕೊಳ್ಳುತ್ತೇನೆ. ಮಾರ್ಕ್ಸ್‌ವಾದಿ ಕಮ್ಯೂನಿಸ್ಟ್ ಪಕ್ಷ ಕ್ರಾಂತಿಕಾರಿಗಳಲ್ಲಿ ಕ್ರಾಂತಿಕಾರಿ ಖಂಡಿತವಾಗಿಯೂ ಹೌದು ಎನ್ನುವುದನ್ನು ಮಾನ್ಯ ಸದಸ್ಯರು ಅರಿತುಕೊಳ್ಳಬೇಕೆಂದು ನಾನು ತಮ್ಮ ಮೂಲಕ ಅವರಲ್ಲಿ ಪ್ರಾರ್ಥಿಸುತ್ತೇನೆ.

ಈಗ ತಂದಿರುವಂಥ ತಿದ್ದುಪಡಿ ಮಸೂದೆ ಯಾವ ಕಾರಣದಿಂದ ಕಾನೂನು ಆಗಲಿಲ್ಲ ಎನ್ನುವುದನ್ನು ವಿವರವಾಗಿ ಎಲ್ಲ ಸದಸ್ಯರೂ ಕೂಡ ತಿಳಿಸಿದ್ದಾರೆ. ಇದರಲ್ಲಿರುವ ಒಂದು ವಿಷಯದ ಬಗ್ಗೆ ಮಾತ್ರ ನಾನು ನನ್ನ ಅಸಮ್ಮತಿಯನ್ನು ಸೂಚಿಸಬೇಕೆಂದು ಇಚ್ಛಿಸುತ್ತೇನೆ. ಈ ಬಿಲ್ಲಿನಲ್ಲಿರುವ 4ನೇ ನಿಬಂಧನೆಯ ಪ್ರಕಾರ

> 'if the tenant pays to the landlord an amount equal to the rent due for a period of two years.'

ಇದರ ಬಗ್ಗೆ ಈಗಾಗಲೇ ಶಿವಮೊಗ್ಗಾ ಜಿಲ್ಲೆಯಿಂದ ಬಂದಿರುವ ಸದಸ್ಯರು ವಿವರವಾಗಿ ಇಲ್ಲಿ ಹೇಳಿದ್ದಾರೆ. ಇದರಲ್ಲಿರುವಂತೆ ಎರಡು ವರ್ಷಗಳು ಎಂದು ಕಾರ್ಯಾವಕಾಶ ಕೊಡುವುದು ಸರಿಯಲ್ಲ ಎಂದು ನನ್ನ ಅಭಿಪ್ರಾಯ. ಇದನ್ನು ತೆಗೆದು ಇದರಲ್ಲಿರುವಂತೆ :

4. "Notwithstanding anything contained in the Principal Act, or in any decree or order of any Court or Tribunal no order for restoration of possession of any land to the landlord on the ground of default in paying rent by the tenant shall be executed."

ಎಂದು ಇಷ್ಟಕ್ಕೇ ಸೀಮಿತವಾಗಿರಬೇಕೆಂದು ಒತ್ತಾಯ ಮಾಡುತ್ತೇನೆ. ಇಷ್ಟನ್ನು ಮಾಡಿದರೆ ಸರಿಯಾಗುತ್ತದೆ ಎಂದು ಹೇಳಿ ಇಲ್ಲಿ ತಂದಿರುವ ತಿದ್ದುಪಡಿಗೆ ನನ್ನ ಹೃತ್ಪೂರ್ವಕವಾದ ಬೆಂಬಲವನ್ನು ಕೊಡುತ್ತೇನೆ. ಇದರ ಬಗ್ಗೆ ಮೇಲ್ಮನೆಯವರು ಹಿಂದೆ ಮಾಡಿದಂತೆ ಇದು ಪಾಸಾಗದೆ ಇರಲು ಅವಕಾಶ ಬರಬಹುದು, ಇದರ ಬಗ್ಗೆ ಸರಕಾರ ಎಚ್ಚರಿಕೆ ವಹಿಸಿ ಇದನ್ನು ಕಾರ್ಯರೂಪಕ್ಕೆ ತರಬೇಕೆಂದು ಹೇಳಿ ನನ್ನ ಎರಡು ಮಾತುಗಳನ್ನು ಮುಗಿಸುತ್ತೇನೆ.

†ಶ್ರೀ ಎಸ್. ಬಂಗಾರಪ್ಪ.—ಮಾನ್ಯ ಅಧ್ಯಕ್ಷರೇ, ಸರಕಾರದವರು ಮುಂಡನೆ ಮಾಡಿರತಕ್ಕ ತಿದ್ದುಪಡಿ ವಿಧೇಯಕವನ್ನು ನಾನು ಸಂಪೂರ್ಣವಾಗಿ ಸ್ವಾಗತಿಸಿ ಎರಡು ಮಾತುಗಳನ್ನು ಇಲ್ಲಿ ಹೇಳಲು ಇಚ್ಛಿಸಿದ್ದೇನೆ. ಇದರ ಬಗ್ಗೆ ನಮ್ಮ ಒಪ್ಪಿಗೆ ಪಡೆಯಬೇಕೆಂದು ಪುನಃ ಇಲ್ಲಿ ತಂದಿದ್ದಾರೆ. ಕಳೆದ ಸಾರಿ ತಂದಾಗ ಪಾಸು ಮಾಡಿದ ಬಿಲ್ಲನ್ನು ಮೇಲ್ಮನೆಯಲ್ಲಿ ಬೆಂಬಲ ಕೊಡಲಿಲ್ಲ ಎಂದು ಅದಕ್ಕೆ ಒಂದು ಅರ್ಡಿನೆನ್ಸ್‌ನ್ನು ತಂದು ಈಗ ಅದನ್ನು ಬಿಲ್ಲು ಮಾಡಲು ಮತ್ತೆ ಇಲ್ಲಿಗೆ ತಂದಿದ್ದಾರೆ. ಇದರ ಬಗ್ಗೆ ಹೆಚ್ಚು ಹೇಳಲು ಯಾವ ಮಾತೂ ಇಲ್ಲ. ಆದರೆ ಇದರ ಬಗ್ಗೆ ಹೇಳುತ್ತಾ ಕೆಲವರು ಮೇಲ್ಮನೆಯನ್ನು ಏಕೆ ರದ್ದು ಮಾಡಬಾರದು ಎಂದು ನಿರ್ಣಯಗಳನ್ನೂ ಕೂಡ ತಂದಿದ್ದಾರೆಂದು ಹೇಳಿದರು. ಮೇಲ್ಮನೆಯಲ್ಲಿರತಕ್ಕ ನಮ್ಮ ಗೆಳೆಯ ಸದಸ್ಯರೂ ಇದನ್ನು ಯೋಚನೆ ಮಾಡಬೇಕಾಗಿದೆ. ಅವರು ಇದಕ್ಕೆ ಬೇರೆ ಕಾರಣಗಳನ್ನು ಕೊಟ್ಟಿದ್ದಾರೆ. ಏನೇ ಆದರೂ ಕೂಡ ಸಮಾಜವಾದವನ್ನು ವ್ಯವಸ್ಥೆ ಮಾಡಬೇಕೆಂದು ಇರುವಾಗ ಸರಕಾರ ಇದರ ಬಗ್ಗೆ ಪ್ರತ್ಯೇಕವಾಗಿ ವಿಚಾರ ಮಾಡಬೇಕು.

ಮತ್ತೆ ಈ ತಿದ್ದುಪಡಿ ವಿಧೇಯಕದ ಸೆಕ್ಷನ್ (22)ರ ಪ್ರಕಾರ ಸುಮಾರು 1017 ಚಿಲ್ಲರೆ ಕೇಸುಗಳು ಇನ್ನೂ ಇತ್ಯರ್ಥವಾಗದೆ ಇವೆ ಎಂದು ಕೇಳುತ್ತೇವೆ. ಸುಮಾರು 93 ಸಾವಿರ ಚಿಲ್ಲರೆ ಕೇಸುಗಳು ಇತ್ತು ಎಂದು ನನ್ನ ನೆನಪು, ಇದರಲ್ಲಿ ಸುಮಾರು 1017 ಕೇಸುಗಳು ಮಾತ್ರ ಇನ್ನೂ ಇತ್ಯರ್ಥವಾಗಿಲ್ಲ. ಇವರಿಗೆ ರಕ್ಷಣೆ ಕೊಡಬೇಕು. ಇದರ ಬಗ್ಗೆ ಪರಿಶೀಲನೆ ಮಾಡುವಾಗ ಮೇಲ್ಮನೆಯನ್ನು ರದ್ದು ಮಾಡಬೇಕು ಎನ್ನುವ ವಿಚಾರ ಹೇಳಿದರು. ಇದು ಬೇರೆ ವಿಚಾರ. ಮೇಲ್ಮನೆ ರದ್ದು ಮಾಡಬೇಕೇ ಬೇಡವೇ ಎನ್ನುವುದು ಸರಕಾರಕ್ಕೆ ತಿಳಿದ ವಿಚಾರ. ಇದರ ವಿಚಾರದಲ್ಲಿ ಮಂತ್ರಿಮಂಡಲ ತೀರ್ಮಾನ ತೆಗೆದುಕೊಳ್ಳಬೇಕಾಗುತ್ತದೆ ಕಾಲ ಬಂದಾಗ ಇದರ

ಬಗ್ಗೆ ವಿಚಾರ ಮಾಡುವುದೊಳ್ಳೆಯದು. ಎರಡನೆಯದು ಈಗ ಇಲ್ಲಿ ಬಿಲ್ಲು ಬಂದಿದೆ. ಕಾನೂನು ಪ್ರಕಾರ ಆರ್ಡಿನೆನ್ಸ್ ಜಾರಿ ಮಾಡಿದ್ದಾರೆ. ಇದು ಸಂತೋಷದ ವಿಚಾರ. ಇದಕ್ಕೆ ಕಾನೂನಿನಲ್ಲಿ ಅವಕಾಶ ಇದೆ ಅದರಂತೆ ತಕ್ಕ ಕ್ರಮವನ್ನು ಸರಕಾರ ತೆಗೆದುಕೊಂಡಿದ್ದಾರೆ. ಆರ್ಡಿನೆನ್ಸ್‌ನ್ನು ತೆಗೆದು ಅದಕ್ಕೆ ಬದಲಾಗಿ ಬಿಲ್ಲು ತಂದು ನಮ್ಮ ಒಪ್ಪಿಗೆಯನ್ನು ಕೇಳುತ್ತಿರುವುದಕ್ಕಾಗಿ ನಾನು ತುಂಬಾ ಸಂತೋಷಪಡುತ್ತೇನೆ. ಇಂತಹ ಪ್ರೊಗ್ರೆಸೀವ್ ಮೆಷರ್ಸ್‌ಗಳನ್ನು ಸರಕಾರ ತರುವಾಗ ಇದನ್ನು ಸ್ವಾಗತಮಾಡಿ ನಾವು ಸಂಪೂರ್ಣವಾಗಿ ಒಪ್ಪುತ್ತೇವೆ. ಮತ್ತು ನಮ್ಮ ಸಭೆಯಲ್ಲಿ ಎಲ್ಲರೂ ಶ್ರೀಮಾನ್ ಶಾಮಣ್ಣನವರೂ ಸಹ ಒಪ್ಪುತ್ತಾರೆ ಎಂದು ನಾನು ಹೇಳುತ್ತೇನೆ. ಆದಷ್ಟು ಶೀಘ್ರವಾಗಿ ಒಂದು ಸಮಗ್ರವಾದ ಭೂಶಾಸನವನ್ನು ಸರಕಾರ ತರಲಿ ಎಂದು ಹೇಳುತ್ತೇನೆ. ಸೆಕ್ಷನ್ 14ರ ಪ್ರಕಾರ ತಿದ್ದುಪಡಿತರಲು ಸರಕಾರ ಹೇಗೆ ಮನಸ್ಸು ಮಾಡಿದರೋ ಅದೇ ರೀತಿ ಶೀಘ್ರವಾಗಿ ತಮ್ಮ ಜಾವಾಬುದಾರಿಯನ್ನು ಅರಿತು ಈ ಕಾನೂನನ್ನು ಜಾಗ್ರತೆ ಜಾರಿಗೆ ತರುವ ದಿಟ್ಟತನವನ್ನು ತೋರುತ್ತಾರೆ ಎಂದು ನಾನು ಆಶಿಸುತ್ತೇನೆ. ಮಾನ್ಯ ಅಧ್ಯಕ್ಷರು ಇಷ್ಟು ಮಾತಾನಾಡಲು ಅವಕಾಶ ಕೊಟ್ಟುದಕ್ಕಾಗಿ ಅವರನ್ನು ವಂದಿಸಿ ನನ್ನ ಭಾಷಣವನ್ನು ಮುಗಿಸುತ್ತೇನೆ.

ಶ್ರೀ ಎ. ಶರಣಪ್ಪ (ದೇವದುರ್ಗ).—ಮಾನ್ಯ ಅಧ್ಯಕ್ಷರೇ, ಈ ದಿವಸ ಹಿಂದೆ ಇದೇ ಮಾನ್ಯ ಸಭೆಯಲ್ಲಿ ಪಾಸಾದ ಭೂಸುಧಾರಣೆ ಶಾಸನಕ್ಕೆ ಒಂದು ತಿದ್ದುಪಡಿಯನ್ನು ತಂದಾಗ ಇದಕ್ಕೆ ಎಲ್ಲರೂ ಇಲ್ಲ ಒಪ್ಪಿಗೆ ಕೊಟ್ಟದ್ದು ನಿಜ. ಆದರೆ ಇಂತಹ ಒಂದು ತಿದ್ದುಪಡಿ ಕೌನ್ಸಿಲ್ ಮುಂದೆ ಹೋದಾಗ ಸಮಗ್ರವಾದ ಒಂದು ಶಾಸನ ತರಬೇಕೆಂದು ಅಲ್ಲಿ ಈ ತಿದ್ದುಪಡಿ ಮಸೂದೆ ಪಾಸಾಗದೆ ಉಳಿದು ಹೋಯಿತು. ಕೌನ್ಸಿಲ್ ಸದಸ್ಯರು ಇದಕ್ಕೆ ಒಪ್ಪಿಗೆ ಕೊಡಬಹುದಾಗಿತ್ತು. ಆದರೆ ನಾನು ಇಂತಹ ಒಂದು ಸಮಯದಲ್ಲಿ ಆಡಳಿತ ಪಕ್ಷದ ನಾಯಕರಿಗೂ ಮತ್ತು ನಮ್ಮ ಪಕ್ಷದ ಹಿರಿಯ ನಾಯಕರಿಗೂ ವಿನಂತಿ ಮಾಡಿಕೊಳ್ಳುವುದು ವಿರೋಧ ಪಕ್ಷದ ನಾಯಕರುಗಳನ್ನು ಸಮೀಪಕ್ಕೆ ತೆಗೆದುಕೊಂಡು ಸರ್ವರಿಗೂ ಸಮಾಧಾನವಾಗುವಂತೆ ಇಂತಹ ಒಂದು ಕಾನೂನು ಪಾಸಾಗಲು ಅವಕಾಶ ಮಾಡಬಹುದಾಗಿತ್ತು. ಹಾಗೆ ಆಲ್ಲಿ ಮಾಡದೇ ಹೋದುದರಿಂದ ಕೌನ್ಸಿಲ್ ಮುಂದೆ ಇಂತಹ ಒಂದು ಶಾಸನ ಬಂದಾಗ ಅದು ಪಾಸಾಗದೆ ಹೋಯಿತು. ಇದಕ್ಕಾಗಿ ಸರಕಾರ ಒಂದು ಸುಗ್ರೀವಾಜ್ಞೆ ಹೊರಡಿಸಿತ್ತು. ಅದನ್ನು ಕಾನೂನು ರೂಪಕ್ಕೆ ತರುವುದು ಸಲುವಾಗಿ ಇಂತಹ ಒಂದು ತಿದ್ದುಪಡಿ ಕಾನೂನನ್ನು ನಮ್ಮ ಒಪ್ಪಿಗೆಗಾಗಿ ಇಲ್ಲಿ ತಂದಿದ್ದಾರೆ. ಇದನ್ನು ವಿಧಾನ ಸಭೆಯಲ್ಲಿ ತರುವಾಗ ತಿದ್ದುಪಡಿ ಎಷ್ಟು ತಂದಿದ್ದಾರೋ ಅಷ್ಟನ್ನು ಮಾತ್ರ ಇಲ್ಲಿ ಪಾಸು ಮಾಡಬೇಕು ಪುನಃ ಈ ಮಸೂದೆ ವಿಧಾನ ಪರಿಷತ್ತಿಗೆ ತೆಗೆದುಕೊಂಡು ಹೋಗುವ ಅವಶ್ಯಕತೆ ಇಲ್ಲ ಎಂದು ಕಾಣುತ್ತೆ. ಮಾನ್ಯ ಸಭೆಯಲ್ಲಿ ಒಂದು ತಿದ್ದುಪಡಿ ಪಾಸಾಗಿರುವಾಗ ಮತ್ತೆ ಅದು ಪರಿಷತ್ತಿಗೆ ಹೋಗುವ ಅವಶ್ಯಕತೆ ಇಲ್ಲ ಎಂದು ನನಗೆ ಕಾಣುತ್ತೆ. ಸುಗ್ರೀವಾಜ್ಞೆಯ ಬದಲಾಗಿ ಇಂದು ಒಂದು ತಿದ್ದುಪಡಿ ಮಸೂದೆ ತಂದಿರುವುದನ್ನು ನಾವು ಪಾಸುಮಾಡಬೇಕಾಗಿದೆ ಮತ್ತು ಇದರಿಂದ ಗೇಣಿದಾರರಿಗೆ ಅನುಕೂಲವಾಗುತ್ತೆ ಮತ್ತು ಇದರಿಂದ ಹೆಚ್ಚು ಪರಿಹಾರ ಸಿಗುತ್ತದೆ. ಇದಕ್ಕಾಗಿ ನಮ್ಮ ಬೆಂಬಲವನ್ನು ಇಲ್ಲಿ ಕೊಡಬೇಕು. ಇದನ್ನು ಎಲ್ಲರೂ ಒಮ್ಮತದಿಂದ ಪಾಸುಮಾಡಬೇಕೆಂದು ಹೇಳಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

†ಶ್ರೀ ಎನ್. ಎಸ್. ಗುರುಸಿದ್ದಪ್ಪ (ಬಿಳಿಗೆರೆ).—ಸ್ವಾಮೀ, ಸಮಗ್ರವಾದ ಒಂದು ಭೂಸುಧಾರಣೆಯನ್ನು ಜಾರಿಗೆ ತರುತ್ತಾರೆ ಮತ್ತು ಹಳ್ಳಿಗಳಲ್ಲಿರುವ ಗೇಣಿದಾರರಿಗೆ ಅನುಕೂಲವಾಗುತ್ತೆ ಎಂದು ಹೇಳುತ್ತ ಸರಕಾರ ಬರುತ್ತಿದೆ. ಹಾಗಿರುವಾಗ ಗೇಣಿದಾರರುಗಳ ಅನುಕೂಲಕ್ಕಾಗಿ ಎಂದು ಹೇಳಿ ಇಂತಹ ಒಂದು ಆರ್ಡಿನೆನ್ಸ್ ತರುವ ಅವಶ್ಯಕತೆಯೇ ಇರಲಿಲ್ಲ. ಸರಕಾರದವರು ಗೇಣಿದಾರರುಗಳ ಉಚ್ಚಾಟನೆಯಾಗುತ್ತಿದೆ ಎಂದು ಈ ರೀತಿ ಮಾಡುತ್ತಿದ್ದೇವೆ ಎಂದು ಹೇಳಿದರು. ಆದರೆ ನಮ್ಮ ಮೈಸೂರು ಜಿಲ್ಲೆಯಲ್ಲಿ ಭೂಮಾಲೀಕರು ಹಾಗೂ ಗೇಣಿದಾರರುಗಳು ಒಂದು ರೀತಿಯಾಗಿ ಸಹೃದಯತೆಯಿಂದ ಗೇಣಿಯನ್ನು ಕೊಟ್ಟು ಸರಿಯಾಗಿ ಕೆಲಸ ಮಾಡಿಸಿಕೊಂಡು ಬರುತ್ತಿದ್ದಾರೆ. ಹೀಗಿರುವಾಗ ಗೇಣಿದಾರರಿಗಾಗಿ ಎಂದು ಇಲ್ಲಿ ಆರ್ಡಿನೆನ್ಸ್ ತರುವ ಅವಶ್ಯಕತೆಯೇ ಇರಲಿಲ್ಲ. ಸರಕಾರ ಸಮಗ್ರವಾದ ಭೂಸುಧಾರಣೆ ತರುವುದರ ಕಡೆಗೆ ಲಕ್ಷ ಕೊಡಬೇಕು ಮತ್ತು ಇದು ಬೇಗನೆ ಜಾರಿಗೆ ಬರುವಂತೆ ಮಾಡಬೇಕೆಂದು ಹೇಳುತ್ತೇನೆ.

†ಶ್ರೀ ಜಿ. ಮಾದೇಗೌಡ (ಕಿರುಗಾವಲು).—ಮಾನ್ಯ ಅಧ್ಯಕ್ಷಿಣಿಯವರೆ, ಸರ್ಕಾರದವರು ಹಿಂದೆ ಇದೇ ವಿಧೇಯಕವನ್ನು ಈ ಸಭೆಯಮುಂದೆಮುಂಡಿಸಿ ಅದನ್ನು ಸರ್ವಾನುಮತದಿಂದ ಅಗೀಕಾರ ಮಾಡಿದಮೇಲೇ, ಅದು ಮೇಲ್ಮನೆಯಲ್ಲಿ ಪಾಸಾಗದೆ ಬದ್ದುಹೋಗಿದ್ದಕ್ಕೆ ಅದರ ಒಂಬು ಆಪಾದನೆಯನ್ನು ಸಂಸ್ಥಾ ಕಾಂಗ್ರೆಸ್‌ನ ಮೇಲೆ ಹೊರಿಸುತ್ತಿದ್ದಾರೆ. ಒಂದು ವಿಚಾರವನ್ನು ನಾನು

(ಶ್ರೀ ಬಿ. ಬಾದೇಗೌಡ)

ಸರ್ಕಾರಕ್ಕೆ ತಿಳಿಸಬಯಸುತ್ತೇನೆ, ಏನೆಂದರೆ, ನಮ್ಮ ಕಾರ್ಯಕರ್ತಾಪಕ್ಕೂ ವಿಧಾನಪರಿಷತ್ತಿನ ಕಾರ್ಯಕರ್ತಾಪಕ್ಕೂ ವ್ಯತ್ಯಾಸವಿವೆ. ಆ ರೀತಿ ಏನಾದರು ವ್ಯತ್ಯಾಸವಿಲ್ಲದಿದ್ದರೆ ವಿಧಾನಪರಿಷತ್ ಆದರೂ ಕೂಡ ಏತಕ್ಕೆ ಇರಬೇಕಾಗಿತ್ತು ಎಂಬುದು ನನ್ನ ಪ್ರಶ್ನೆ. ಕೆಳಮನೆಯಲ್ಲಿ ಏನಾದರು ಒಂದು ತಿರ್ಮಾನ ತೆಗೆದುಕೊಂಡಾಗ ಅದು ಏನಾದರು ಆತುರದಲ್ಲಿ ತೀರ್ಮಾನವಾಗಿದ್ದರೆ ಅಥವಾ ಅದರಲ್ಲಿ ಏನಾದರೂ ಲೋಪ ದೋಷಗಳಿದ್ದರೆ ಅದನ್ನು ಎತ್ತಿ ಹಿಡಿಯುವುದಕ್ಕಾಗಿಯೇ ಬುದ್ಧಿವಂತರಿಂದ ಕೂಡಿದ ಮೇಲ್ಮನೆ ಇರುವುದು. ಆದ್ದರಿಂದ ಈ ಮನೆಯಲ್ಲಿ ಆಗಿರತಕ್ಕಂಥ ಲೋಪ ದೋಷಗಳನ್ನು ಸರಿಪಡಿಸತಕ್ಕಂಥ ಹಕ್ಕು ವಿಧಾನಪರಿಷತ್ತಿಗೆ ಇದೆಯೆಂದು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ. ಈ ಒಂದು ಕರ್ತವ್ಯವನ್ನು ಮೇಲ್ಮನೆಯ ಸಂಸ್ಥಾ ಕಾಂಗ್ರೆಸ್‌ನವರು ನಿರ್ವಹಿಸಿದ್ದಾರೆಂದು ಹೇಳುವುದಕ್ಕೆ ಬಯಸುತ್ತೇನೆ. ಆಡಳಿತ ಪಕ್ಷದವರು ಮೇಲ್ಮನೆಯಲ್ಲಿ ಏನು ಒಂದು ತಿದ್ದುಪಡಿಯನ್ನು ಮಂಡಿಸಿದ್ದರೋ ಅದಕ್ಕಿಂತಲೂ ಉತ್ಕೃಷ್ಟವಾದ ತಿದ್ದುಪಡಿಯನ್ನು ಸಂಸ್ಥಾಕಾಂಗ್ರೆಸ್‌ನವರು ಮಂಡಿಸಿದ್ದರಲ್ಲಿ ಯಾವ ತಪ್ಪೂ ಇಲ್ಲವೆಂದು ನಾನು ತಿಳಿದುಕೊಂಡಿದ್ದೇನೆ. ಕೇವಲ ಒಂದೆರಡು ತಿಂಗಳಲ್ಲಿಯೇ ಸಮಗ್ರವಾದಂಥ ತಿದ್ದುಪಡಿಯನ್ನು ಸರ್ಕಾರದವರು ಮಂಡಿಸುವುದರಲ್ಲಿ ಇದ್ದಾಗ ಈ ಒಂದು ತಿದ್ದುಪಡಿಯ ಅವಶಕತೆಯೇ ಇರಲಿಲ್ಲ. ಎರಡು ವರ್ಷ ಯಾರು ಗೇಣಿಯನ್ನು ಕೊಟ್ಟಿರುತ್ತಾರೋ ಅಂತಹವರಿಗೆ ಅವರ ಜಮೀನನ್ನು ಭೂಮಾಲಿಕರು ಬಿಡಿಸಿಕೊಂಡಿದ್ದರೂ ಕೂಡ ಮತ್ತೆ ಗೇಣಿದಾರರಿಗೆ ವಾಪಸ್ ಕೊಡಿಸಬೇಕೆಂಬ ತಿದ್ದುಪಡಿಯನ್ನು ಏನು ಸರ್ಕಾರದವರು ಈಗ ಮಂಡಿಸಿದ್ದಾರೆ, ಅದಕ್ಕೆ ಬದಲಾಗಿ ಎರಡು ವರ್ಷ ಗೇಣಿಯನ್ನು ಕೊಡದಿದ್ದರೂ ಕೂಡ ಅಂತಹವರನ್ನು ಜಮೀನಿನಿಂದ ಬಿಡಿಸುವುದಕ್ಕೆ ಅವಕಾಶ ಕೊಡಬಾರದು ಎಂಬ ತಿದ್ದುಪಡಿಯನ್ನು ಮೇಲ್ಮನೆಯಲ್ಲಿ ಸಂಸ್ಥಾಕಾಂಗ್ರೆಸ್‌ನವರು ಮಂಡಿಸಿದ್ದರು. ಈ ತಿದ್ದುಪಡಿ ಸರ್ಕಾರದ ತಿದ್ದುಪಡಿಗಿಂತ ಇನ್ನೂ ಹೆಚ್ಚಿನ ರೀತಿಯಲ್ಲಿ ಸಮಂಜಸವಾಗಿರಲಿಲ್ಲವೇ ಎಂದು ನಾನು ಕೇಳುತ್ತೇನೆ. ಈಗಿನ ಭೂಸುಧಾರಣಾ ಕಾನೂನನ್ನು ಸಮಗ್ರವಾಗಿ ಬದಲಾವಣೆ ಮಾಡಬೇಕೆಂದಿರುವಾಗ ಎರಡು ವರ್ಷ ಗೇಣಿಯನ್ನು ಕೊಡದಿರುವವರನ್ನು ಒಕ್ಕಲೆಬ್ಬಿಸುವುದರಿಂದ ಯಾವ ಪುರುಷಾರ್ಥವನ್ನು ಸಾಧನೆ ಮಾಡಿದಂತಾಗುತ್ತದೆ ? ಆದ್ದರಿಂದ ಮೇಲ್ಮನೆಯವರು ತಂದಂಥ ತಿದ್ದುಪಡಿ ಸಹಜವಲ್ಲವೇ ? ಇನ್ನು ಎರಡು ತಿಂಗಳ ಅಂತರದಲ್ಲಿ ಸಮಗ್ರವಾದ ಭೂಸುಧಾರಣಾ ಕಾನೂನನ್ನು ಸರ್ಕಾರದವರೇ ತರುವುದರಲ್ಲಿ ಇದ್ದಾಗ, ಮೆಲ್ಮನೆಯಲ್ಲ ಬದ್ದುಹೋದ ತಿದ್ದುಪಡಿಗೆ ಮತ್ತೆ ಆರ್ಡಿನೆನ್ಸ್ ಹೊರಡಿಸುವ ಅವಶ್ಯಕತೆಯಾದರು ಏನಿತ್ತು ? ಈ ಸಭೆಯಲ್ಲಿ ಒಪ್ಪಿಗೆ ಪಡೆದ ವಿಧೇಯಕಕ್ಕೆ ಮೇಲ್ಮನೆಯಲ್ಲಿ ಒಂದು ಸಣ್ಣ ತಿದ್ದುಪಡಿಯನ್ನು ಮಂಡಿಸಿ ಅದು ಪಾಸಾಗಿ, ಸರ್ಕಾರದ ತಿದ್ದುಪಡಿ ಬಿದ್ದುಹೋಗಿದ್ದಕ್ಕೆ ಅದರ ಒಂದು ತಪ್ಪನ್ನು ಸಂಸ್ಥಾಕಾಂಗ್ರೆಸ್‌ನವರ ಮೇಲೆ ಹೊರಿಸಿ ಮತ್ತೆ ಆರ್ಡಿನೆನ್ಸ್ ಹೊರಡಿಸಿದ್ದು ರಾಜಕೀಯ ದೃಷ್ಟಿಯಿಂದ ಅಲ್ಲವೆ. ಸಂಸ್ಥಾ ಕಾಂಗ್ರೆಸ್‌ನವರು ಮಂಡಿಸಿದ್ದ ತಿದ್ದುಪಡಿ ಪಾಸಾಯಿತೆಂಬ ಕಾರಣದಿಂದ ಅದರ ಒಂದು ತಪ್ಪನ್ನು ಸಂಸ್ಥಾಕಾಂಗ್ರೆಸ್‌ನವರ ಮೇಲೆ ಹೊರಿಸುವುದು ಅಷ್ಟೊಂದು ಸಮಂಜಸವಲ್ಲ. ಎರಡು ವರ್ಷದ ಗೇಣಿಯನ್ನು ಕೊಡಬೇಕೆಂದು ಏನು ತಿದ್ದುಪಡಿಯನ್ನು ಸರ್ಕಾರದವರು ಮಂಡಿಸಿದ್ದಾರೆ ಅದೂ ಕೂಡ ರಾಜಕೀಯದಿಂದ ಕೂಡಿದೆ ಎಂದು ನಾವು ಭಾವನೆ ಮಾಡುವುದಕ್ಕೆ ಅವಕಾಶವಿಲ್ಲವೆ ? ಮುಖ್ಯವಾಗಿ ಆರೋಪ ಮತ್ತು ಪ್ರತ್ಯಾರೋಪ ಮಾಡುವುದರಲ್ಲಿ ಯಾವ ಸತ್ಯಾಂಶವೂ ಇಲ್ಲ. ಕಳೆದ 30-40 ವರ್ಷಗಳಿಂದ ಯಾರು ಗೇಣಿದಾರರಾಗಿದ್ದಾರೆ ಅಂತಹವರಿಗೆ ರಕ್ಷಣೆ ಕೊಡುವ ಸಲುವಾಗಿ ಭೂಸುಧಾರಣೆಯನ್ನೇ ಸಮಗ್ರವಾಗಿ ಬದಲಾವಣೆ ಮಾಡುವ ನಮ್ಮನೇಶ ಇರತಕ್ಕ ಕಾಲದಲ್ಲಿ ಎರಡು ವರ್ಷ ಗುತ್ತಿಗೆ ಕೊಡದಿರುವವರನ್ನು ಒಕ್ಕಲೆಬ್ಬಿಸುವುದರಿಂದ ಯಾವ ಒಂದು ಸಾಧನೆಯನ್ನು ಮಾಡಿದಂತಾಗುವುದಿಲ್ಲ. ಈ ಕಾರಣದಿಂದ ಮೇಲ್ಮನೆಯಲ್ಲಿ ಮಂಡಿಸಿದ್ದ ಸಂಸ್ಥಾ ಕಾಂಗ್ರೆಸ್ಸಿನ ತಿದ್ದುಪಡಿಯನ್ನು ಸರ್ಕಾರದವರು ಒಪ್ಪಿದ್ದರೆ ಚೆನ್ನಾಗಿರುತ್ತಿತ್ತು. ನಮ್ಮ ಮೇಲೆ ಆರೋಪ ಮಾಡಿದ್ದು ಸರಿಯಲ್ಲವೆಂದು ಹೇಳಿ, ನಮಗೆ ಭೂಸುಧಾರಣೆಗೆ ಸಂಸ್ಥಾ ಕಾಂಗ್ರೆಸ್‌ನವರು ಬದ್ಧರಾಗಿದ್ದಾರೆಂದು ತಿಳಿಸಿ, ಈಗ ಸಭೆಯ ಮುಂದೆ ಮಂಡಿಸಿರುವ ವಿಧೇಯಕವನ್ನು ಸ್ವಾಗತಿಸಿ ನನ್ನ ಮಾತನ್ನು ಮುಗಿಸುತ್ತೇನೆ.

Sri B. B. SAYANAK (Belgaum).– Madam Speaker, I welcome this amendment to the Land Reforms Act. But I want to ask the Government what was the necessity to bring this Ordinance. According to Section 22 of the Mysore Land Reforms Act Government have given protection to the tenants. But there are very few cases of eviction for

default, If our intention and that of the Government is to give protection to the tenants the tenants should produce more. We must consider whether we are giving these lands to agriculturists or tenants who produce more or less. If the agriculturists are not going to produce more, what is the use of this protection. I am of the opinion that if the agriculturists or tenants do not produce more, Government should confiscate their lands forthwith. This is my suggestion.

I welcome the Bill.

† ಶ್ರೀ ಎನ್. ಹುಚ್ಚಮಾಸ್ತಿ ಗೌಡ (ಕಂದಾಯ ಶಾಖೆಯ ಮಂತ್ರಿಗಳು). –ಮಾನ್ಯ ಅಧ್ಯಕ್ಷಣಿಯವರೇ, ಶ್ರೀಮಾನ್ ಶಾಮಣ್ಣನವರು ತಂದಿರತಕ್ಕ ನಿರ್ಣಯ ನಮ್ಮ ಮೂಲ ಮಸೂದಾ ಕಾನೂನಿಗೆ ತದ್ವಿರುದ್ಧವಾದುದು. ಶ್ರೀಮಾನ್ ಶಾಮಣ್ಣನವರು ಹೇಳಿರತಕ್ಕಂಥ ವಾದ ಹೊಸದೇನೂ ಅಲ್ಲ. ಕಳೆದ ಅಧಿವೇಶನದಲ್ಲಿ ಈ ಒಂದು ಮಸೂದಾ ಕಾನೂನನ್ನು ಸಭೆಯ ಮುಂದೆ ತಂದಾಗ ಅದರ ಒಂದು ಹಿತಗಳನ್ನು ದೃಷ್ಟಿಯಲ್ಲಿ ಇಟ್ಟುಕೊಳ್ಳದೆ ಶ್ರೀಮಾನ್ ಶಾಮಣ್ಣನವರು ಬೇರೆ ಕಾರಣಗಳನ್ನು ಕೊಟ್ಟು ವಿರೋಧ ಮಾಡಿದ್ದರು. ಆ ಒಂದು ವಿಷಯವನ್ನು ಇಂದು ಶ್ರೀಮಾನ್ ಕಕ್ಕಿಲಾಯ ಅವರು ಸ್ಪಷ್ಟಪಡಿಸಿದ್ದಾರೆ. ಮೇಲ್ಮನೆಯಲ್ಲಿ ಈ ಮಸೂದಾ ಕಾನೂನಿಗೆ ಸಂಸ್ಥಾ ಕಾಂಗ್ರೆಸ್ಸಿನವರು ತಂದಿದ್ದ ತಿದ್ದುಪಡಿ ಬಹಳ ಅವಶ್ಯಕವಾಗಿತ್ತು ಎಂಬುದನ್ನು ಈಗತಾನೆ ಮಾತನಾಡಿದ ಸಂಸ್ಥಾಕಾಂಗ್ರೆಸ್ಸಿನ ಮಾನ್ಯ ಸದಸ್ಯರೊಬ್ಬರು ಹೇಳುತ್ತಾ, ಈ ಒಂದು ಮಸೂದಾ ಕಾನೂನಿನ ಬಗ್ಗೆ ಸಂಸ್ಥಾ ಕಾಂಗ್ರೆಸ್‌ನವರು ತಳೆದಿರತಕ್ಕ ಧೋರಣೆ ಬಗ್ಗೆ ಬಹಳ ಚೆನ್ನಾಗಿ ವಾದ ಮಾಡಿದರು. ಮೇಲ್ಮನೆಯಲ್ಲಿ ಅಡಳಿತ ಕಾಂಗ್ರೆಸ್‌ನವರು ಮಂಡಿಸಿದ್ದ ತಿದ್ದುಪಡಿಗಿಂತಲೂ ಸಂಸ್ಥಾ ಕಾಂಗ್ರೆಸ್‌ನವರು ತಂದಿದ್ದ ಪ್ರಗತಿದಾಯಕವಾದ ತಿದ್ದುಪಡಿಯನ್ನು ಸರ್ಕಾರದವರು ಒಪ್ಪಿಕೊಂಡಿದ್ದರೆ ಚೆನ್ನಾಗಿರುತ್ತಿತ್ತು ಮತ್ತು ಕೆಳಮನೆಯಲ್ಲಿ ಅತುರಾತುರವಾಗಿ ಪಾಸ್ ಮಾಡಿರತಕ್ಕಂಥ ಕಾನೂನಗಳನ್ನು ಮೇಲ್ಮನೆಯಲ್ಲಿ ನಿಧಾನವಾಗಿ ಆಲೋಚನೆ ಮಾಡಿ ಅವಕ್ಕೆ ಸೂಕ್ತ ತಿದ್ದುಪಡಿ ತರುವುದಕ್ಕೆ ಅವಕಾಶವಿದೆ, ಕರ್ತವ್ಯ ದೃಷ್ಟಿಯಿಂದ ಅವರು ಆ ಕೆಲಸ ಮಾಡಿದ್ದಾರೆಂದು ಸಹ ಈಗತಾನೆ ಮಾತನಾಡಿದ ಮಾನ್ಯ ಸದಸ್ಯರು ಹೇಳಿದರು.

ಮುಖ್ಯ ವಿಷಯ ಈ ರೀತಿ ಇದೆ.—

> "On page 3, in clause 4, in line 6, for the words 'executed if the tenant pays to the landlord an amount equal to the rent due for a period of two years, the words 'executed until further legislation in this behalf' may be substituted." ಎಂದು

5-00 P.M.

ಮೇಲ್ಮನೆಯಲ್ಲಿ ಸಂಸ್ಥಾಕಾಂಗ್ರೆಸ್ಸಿನವರು ಒಂದು ತಿದ್ದುಪಡಿಯನ್ನು ತಂದಿದ್ದರು. ಆ ತಿದ್ದುಪಡಿಯನ್ನು ಕಾರ್ಯಗತ ಮಾಡುವುದಕ್ಕೆ ಸಾಧ್ಯವಿಲ್ಲ, ಅದು ಅನಿರ್ಧಿಷ್ಟವಾಗಿದೆ ಎಂದು ನಾನು ಬಹಳ ಸ್ಪಷ್ಟವಾಗಿ ನನ್ನ ಉತ್ತರದಲ್ಲಿ ತಿಳಿಸಿದ್ದೇನೆ. ಸುಪ್ರೀಮ್‌ಕೋರ್ಟಿನ ತೀರ್ಮಾನದ ಪ್ರಕಾರ ಅಂಥಾ ಒಂದು ತಿದ್ದುಪಡಿಯನ್ನು ಒಪ್ಪಿಕೊಳ್ಳುವುದಕ್ಕೆ ಕಾನೂನಿನ ಅಡ್ಡಿ ಇಜೆ ಎಂದು ನಾನು ಹೇಳಿದೆ. ಆ ತೀರ್ಮಾನವನ್ನು ಕೂಡ ಆ ಸಭೆಯ ಗಮನಕ್ಕೆ ತಂದು ಆ ತಿದ್ದುಪಡಿಯನ್ನು ಕಾರ್ಯಗತ ಮಾಡುವುದಕ್ಕೆ ಕಾನೂನಿನ ಅಡ್ಡಿ ಬರುತ್ತದೆ. ಆದ್ದರಿಂದ ಅದನ್ನು ಕಾರ್ಯಗತ ಮಾಡುವುದಕ್ಕೆ ಸಾಧ್ಯವಿಲ್ಲ ಎಂದು ನಾನು ಹೇಳಿದ್ದೇನೆ. ಅವರ ತಿದ್ದುಪಡಿಯ ಬಗ್ಗೆ ಅವರು ಹೇಳತಕ್ಕಂಥಾ ಮಾತಿನಲ್ಲಿ ಹೆಚ್ಚು ಪ್ರಗತಿದಾಯಕವಾಗಿ ಕಂಡುಬಂದರೂ ಕೂಡ ಅದನ್ನು ಕಾರ್ಯರೂಪಕ್ಕೆ ತರುವುದರ ಹಿಂದೆ ಅವರು ದುರುದ್ದೇಶವನ್ನು ಇಟ್ಟುಕೊಂಡಿದ್ದಾರೆ ಎಂದು ನಾನು ಭಾವನೆ ಮಾಡಿ ಆ ತಿದ್ದುಪಡಿಯನ್ನು ಒಪ್ಪಿಕೊಳ್ಳುವುದಕ್ಕೆ ಸಾಧ್ಯವಿಲ್ಲ ಎಂದು ನಾನು ಸ್ಪಷ್ಟಪಡಿಸಿದ್ದೇನೆ. ಮೇಲ್ಮನೆಯಲ್ಲಿ ನಮಗೆ ಸಾಕಷ್ಟು ಬಹುಮತ ಇಲ್ಲದೇ ಇದ್ದುದರಿಂದ ಅವರು ತಂದಂತಹ ತಿದ್ದುಪಡಿ ಪಾಸಾಯಿತು. ನಂತರ ನಾವು ಆ ತಿದ್ದುಪಡಿಯನ್ನು ಒಪ್ಪಿಕೊಂಡರೆ ನಾವು ತರತಕ್ಕಂಥಾ ಕಾನೂನಿನ ಫಲ ಜನಗಳಿಗೆ ಸಿಕ್ಕುವುದಿಲ್ಲ ಎಂದು ಹೇಳಿ ನಾವು ಅದನ್ನು ಒಪ್ಪಲಿಲ್ಲ. ಈ ಮಸೂದೆಯ ಮೇಲೆ ಈಗ ಮತ್ತು ಕಳೆದ ಸಾರಿ ಸಾಕಷ್ಟು ಚರ್ಚೆಯಾಗಿದೆ. ಈ ಒಂದು ಕಾನೂನಿಂದ ಎಷ್ಟೋ ಜನ ಅಲ್ಪಸಂಖ್ಯಾತರಿಗೆ

(ಶ್ರೀ ಎನ್. ಹುಚ್ಚಮಾಸ್ತಿಗೌಡ)

ಮತ್ತು ಗೇಣಿದಾರರಿಗೆ ಸಹಾಯಕವಾಗುತ್ತದೆ ಇದು ಪ್ರಗತಿದಾಯಕವಾದ ಕಾನೂನು ಹಾಗೆ ಎಂದು ಹೇಳಿ ಕಳೆದ ಅಧಿವೇಶನದಲ್ಲಿ ಈ ಮಸೂದೆ ಮೇಲೆ ಚರ್ಚೆ ನಡೆಯುವಾಗ ಅನೇಕ ಮಾನ್ಯ ಸದಸ್ಯರು ಹೇಳಿದ್ದಾರೆ. ಮತ್ತು ಈ ಮಸೂದೆಯನ್ನು ಈ ಸಭೆಯ ಮಾನ್ಯ ಸದಸ್ಯರು ಸರ್ವಾನು ಮತದಿಂದ ಪಾಸು ಮಾಡಿದ್ದರು. ಮತ್ತೆ ಇದನ್ನು ಈ ಸಭೆಯ ಮುಂದೆ ತರುವುದಕ್ಕೆ ಕಾರಣವೇನು ಎಂಬುದು ಮಾನ್ಯ ಸದಸ್ಯರಿಗೆ ಗೊತ್ತಿದೆ. ಈ ಬಗ್ಗೆ ಸುಗ್ರೀವಾಜ್ಞೆಯನ್ನು ಹೊರಡಿಸಬೇಕಾದಂತಹ ಅವಶ್ಯಕತೆ ಏನಿತ್ತು, ಒಂದು ಪ್ರೆಸ್ಟೀಜಿಗೋಸ್ಕರ ಸರ್ಕಾರದವರು ಈ ಕಾನೂನಿನ ವಿಷಯದಲ್ಲಿ ಸುಗ್ರೀವಾಜ್ಞೆಯನ್ನು ಹೊರಡಿಸಿದ್ದಾರೆ ಎಂದು ಶ್ರೀಮಾನ್ ಶಾಮಣ್ಣನವರು ಹೇಳಿದರು. ಇದು ಪ್ರೆಸ್ಟೀಜ್ ವಿಷಯವಲ್ಲ. ಇದು ಅಲ್ಪಸಂಖ್ಯಾತರ ಪ್ರೆಸ್ಟೀಜಿಗೆ ಸಂಬಂಧಪಟ್ಟದ್ದು. ಅದಷ್ಟು ಜಾಗ್ರತೆ ಅಲ್ಪಸಂಖ್ಯಾತರಿಗೆ ಈ ಒಂದು ಕಾನೂನಿನ ಪ್ರಯೋಜನ ಸಿಕ್ಕಲೇಬೇಕು ಎನ್ನುವ ಉದ್ದೇಶದಿಂದ ಮತ್ತು ಗೇಣಿದಾರರನ್ನು ಒಕ್ಕಲೆಬ್ಬಿಸುವುದಕ್ಕೆ ಅವಕಾಶವಾಗದಿರಲಿ ಅವರಿಗೆ ಈ ಒಂದು ಕಾನೂನಿನ ರಕ್ಷಣೆ ಸಿಕ್ಕಲಿ ಎನ್ನುವ ಉದ್ದೇಶದಿಂದ ಸುಗ್ರೀವಾಜ್ಞೆಯನ್ನು ಹೊರಡಿಸಬೇಕಾಯಿತೇ ಹೊರತು ನಮ್ಮ ಒಂದು ಪ್ರೆಸ್ಟೀಜ್ ಗೋಸ್ಕರ ನಾವು ಸುಗ್ರೀವಾಜ್ಞೆಯನ್ನು ಹೊರಡಿಸಲಿಲ್ಲ ಎಂದು ನಾನು ಸ್ಪಷ್ಟಪಡಿಸುವುದಕ್ಕೆ ಇಷ್ಟಪಡುತ್ತೇನೆ.

ಕೆಲವು ಮಾನ್ಯ ಸದಸ್ಯರು ನಾವು ಪ್ರತಿಗಾಮಿಗಳು ಎಂದು ಹೇಳುವುದಕ್ಕೆ ಇಷ್ಟಪಡದೆ ಇದ್ದರೂ ಅವರ ಮಾದಲ್ಲಿ ಒಂದು ತರಹ, ಮನಸ್ಸಿನಲ್ಲಿ ಒಂದು ತರಹ ಆ ಭಾವನೆಯನ್ನು ಇಟ್ಟುಕೊಂಡು ಮಾತನಾಡಿದ್ದಾರೆ. ನಾವು ತಂದಿರತಕ್ಕಂಥಾ ಮಸೂದಾಕಾನೂನು ಪ್ರಗತಿದಾಯಕವಾಗಿದೆ ಎಂಬುದು ಸ್ಪಷ್ಟವಾಗುತ್ತದೆ. ಅದನ್ನು ಅನೇಕ ಮಾನ್ಯಸದಸ್ಯರು ಸ್ಪಷ್ಟವಾಗಿ ಹೇಳಿದ್ದಾರೆ. ಈಗ ನಾವು ತಂದಿರತಕ್ಕ ಕಾನೂನಿನ ವಿಷಯದಲ್ಲಿ ಗುಣದೋಷಗಳು ಏನಿವೆ ಎಂಬುದರ ಮೇಲೆ ಚರ್ಚೆ ಮಾಡಬೇಕೇ ಹೊರತು ಮುಂದೆ ತರತಕ್ಕಂಥಾ ಕಾನೂನು ಹಾಗಿರುತ್ತದೆ, ಹೀಗಿರುತ್ತದೆ ಎಂದು ಹೇಳಿ ಅದಕ್ಕೋಸ್ಕರ ನಾವು ಈಗ ಇದನ್ನು ವಿರೋಧ ಮಾಡುತ್ತೇವೆ ಎಂದು ಹೇಳತಕ್ಕಂಥಾದ್ದು ಅರ್ಥವಿಲ್ಲದ ಮಾತು. ಈಗ ತಮ್ಮ ಮುಂದೆ ಇರತಕ್ಕಂಥಾ ಕಾನೂನಿನ ವಿಷಯದಲ್ಲಿ ಗುಣದೋಷಗಳು ಏನಿವೆ ಎಂಬುದನ್ನು ದೃಷ್ಟಿಯಲ್ಲಿ ಇಟ್ಟುಕೊಂಡು ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸುವುದು ಒಳ್ಳೆಯದು. ಅದರಂತೆ ಅನೇಕ ಮಾನ್ಯ ಸದಸ್ಯರು ಈ ಮಸೂದೆಯನ್ನು ಅಭಿನಂದಿಸಿದ್ದಾರೆ. ಈ ಮಸೂದೆಗೆ ಸಂಬಂಧಪಟ್ಟ ಹಾಗೆ ನಾವು ಸುಗ್ರೀವಾಜ್ಞೆಯನ್ನು ತರುವುದು ಅವಶ್ಯಕವಾಗಿತ್ತು. ಇದರ ಬಗ್ಗೆ ಮತ್ತು ಈ ಮಸೂದೆಯ ಬಗ್ಗೆ ಈಗಾಗಲೇ ಸಾಕಷ್ಟು ಚರ್ಚೆಯಾಗಿದೆ. ಆದ್ದರಿಂದ ಈ ಮಸೂದಾಕಾನೂನಿಗೆ ಮಾನ್ಯ ಸದಸ್ಯರು ತಮ್ಮ ಒಪ್ಪಿಗೆಯನ್ನು ಕೊಡಬೇಕೆಂದು ನಾನು ಮಾನ್ಯ ಅಧ್ಯಕ್ಷರ ಮೂಲಕ ಈ ಸಭೆಯ ಮಾನ್ಯ ಸದಸ್ಯರನ್ನು ಕೇಳಿಕೊಳ್ಳುತ್ತೇನೆ. ಮತ್ತು ಶ್ರೀಮಾನ್ ಶಾಮಣ್ಣನವರು ಈ ಸುಗ್ರೀವಾಜ್ಞೆಯ ಬಗ್ಗೆ ತಂದಿರತಕ್ಕಂಥಾ ನಿರ್ಣಯವನ್ನು ವಾಪಸ್ಸು ತೆಗೆದು ಕೊಳ್ಳಬೇಕೆಂದು ನಾನು ಅವರನ್ನು ಕೇಳಿಕೊಳ್ಳುತ್ತೇನೆ.

ಶ್ರೀ ಕೋಣಂದೂರು ಲಿಂಗಪ್ಪ.—ನಾವು ಈಗಾಗಲೇ ಈ ಮಸೂದೆಗೆ ನಮ್ಮ ಒಪ್ಪಿಗೆಯನ್ನು ಕೊಟ್ಟಿದ್ದೇವೆ.

ಅಧ್ಯಕ್ಷರು.—ಮಾನ್ಯ ಸದಸ್ಯರಾದ ಶ್ರೀಮಾನ್ ಶಾಮಣ್ಣನವರು ತಮ್ಮ ನಿರ್ಣಯವನು ವಾಪಸ್ಸು ತೆಗೆದುಕೊಳ್ಳುವುದಕ್ಕೆ ಸಿದ್ಧರಾಗಿದ್ದಾರೆಯೇ ?

ಶ್ರೀ ಟಿ. ಆರ್. ಶಾಮಣ್ಣ.—ಈ ಮಾನ್ಯ ಸಭೆಯ ಒಪ್ಪಿಗೆಯನ್ನು ಪಡೆದು ನನ್ನ ನಿರ್ಣಯವನ್ನು ವಾಪಸ್ಸು ತೆಗೆದುಕೊಳ್ಳುವುದಕ್ಕೆ ನಾನು ಸಿದ್ಧನಾಗಿದ್ದೇನೆ.

**MADAM SPEAKER.**—I think the House agrees to the withdrawal of resolution. by Sri Shamanna.

*Resolution was, by leaveof the house, with drawn.*

**MADAM SPEAKER.**—Now I will put the main motion to the House. The question is :

"That the Mysore Land Reforms (Second Amendment and Miscellaneous Provisions) Bill, 1972, be taken into consideration.

*The motion was adopted.*

*Clauses 2 and 3.*

**MADAM SPEAKER.**—The question is :

"That clauses 2 and 3 do stand part of the Bill".

*The motion was adopted.*

Clauses 2 and 3 were added to the Bill.

*Clause 4*

**Sri B. V. KAKKILAYA.**—Madam, I beg to move :

"That at page 3, Clause 4, line 6 for the words "if the tenant pays to the landlord an amount equal to the rent due for a period of two years" the words "if the tenant pays to the landlord an amount equal to ten times the land revenue of the land" shall be substituted.

And,

"That at page 3 at the end of Clause 4, the words "and the amount so paid shall be deemed to be in full discharge of the entire amount decreed or ordered by the Court or Tribunal" shall be added".

**MADAM SPEAKER.**—Amendments moved :

"That at page 3, Clause 4, line 6 for the words "if the tenant pays to the landlord an amount equal to the rent due for a period of two years" the words "if the tenant pays to the landlord an amount equal to ten times the land revenue of the land" shall be substituted.

And,

"That at page 3 at the end of Clause 4, the words "and the amount so paid shall be deemed to be in full discharge of the entire amount decreed or ordered by the Court or Tribunal" shall be added.

ಶ್ರೀ ಬಿ. ವಿ. ಕಕ್ಕಿಲಾಯ.—ಈ ತಿದ್ದುಪಡಿಯ ಬಗ್ಗೆ ನಾನು ಹೆಚ್ಚು ಮಾತನಾಡುವುದಕ್ಕೆ ಇಚ್ಛೆಪಡುವುದಿಲ್ಲ. ನನ್ನ ಹಿಂದಿನ ತಿದ್ದುಪಡಿಯಲ್ಲಿ ಸ್ವಲ್ಪ ವ್ಯತ್ಯಾಸ ಮಾಡಿ ಕೊಚ್ಚಿದ್ದೇನೆ. ಈ ನಭೆಯಲ್ಲಿ ಸಣ್ಣ ಹಿಡುವಳಿದಾರರ ಬಗ್ಗೆಯೂ ಬಹಳ ಚರ್ಚೆ ನಡೆದಿವೆ. ಇನ್ನೊಂದು ಸಮಗ್ರವಾದ ಶಾಸನ ಬರುವವರೆಗೂ ಭೂಮಾಲೀಕರಿಗೆ ಗುತ್ತಿಗೆಯ ಅಂಶ ಏನೂ ದೊರಕದಿದ್ದರೆ ಅವರಿಗೆ ತೊಂದರೆಯಾಗುತ್ತದೆ, ಆದ್ದರಿಂದ ಎರಡು ವರ್ಷದ ಗುತ್ತಿಗೆಯನ್ನಾದರೂ ಅವರಿಗೆ ಕೊಡುವುದಕ್ಕೆ ಈ ಶಾಸನದಲ್ಲಿ ಅವಕಾಶ ಇರಬೇಕು ಎಂದು ಮಾನ್ಯ ಮಂತ್ರಿಗಳು ಸರ್ಕಾರದ ಪರವಾಗಿ ಹೇಳಿದರು. ಈ ವಿಚಾರದಲ್ಲಿ ನನ್ನ ಅಭಿಪ್ರಾಯವೇನೆಂದರೆ ಕೇಂದ್ರ ಸರ್ಕಾರದಲ್ಲಿ ಈ ಭೂಸುಧಾರಣೆಯ ಬಗ್ಗೆ ಪರಿಶೀಲನೆ ಮಾಡಲು ಒಂದು ಸಮಿತಿಯನ್ನು ನೇಮಕ ಮಾಡಿದ್ದಾರೆ. ಅವರು ಮಾಡಿರುವ ಶಿಫಾರಸ್ಸಿನ ಪ್ರಕಾರ ಭೂಕಂದಾಯದ ಇಪ್ಪತ್ತು ಪಟ್ಟು ಗೇಣಿ ಇರಬೇಕು ಎಂದು ನಿರ್ಣಯ ಮಾಡಿ ಅವರು ಈಗಾಗಲೇ ಅದನ್ನು ಪ್ರಕಟ ಮಾಡಿದ್ದಾರೆ. ಈಗ ಯಾವ ಗೇಣಿದಾರನಾಗಲೀ ತಾನು ಗೇಣಿಗೆ ಮಾಡಬೇಕಾದ ಜಮೀನನ್ನು ಉಳಿಸಿಕೊಳ್ಳಬೇಕಾದರೆ ಅವನು ಎರಡು ವರ್ಷಗಳ ಗೇಣಿಯನ್ನು ಕೊಡಬೇಕಾಗುತ್ತದೆ. ಈಗ ಕೊಡಬೇಕಾಗುವ ಗೇಣಿ ಬಹಳ ಜಾಸ್ತಿ. ಆದ್ದರಿಂದ ಇದು ಬಹಳ ದುಬಾರಿಯಾದಂತಹ ಹಣವಾಗುತ್ತದೆ, ಈಗ ನಮ್ಮ ದಕ್ಷಿಣಕನ್ನಡ ಜಿಲ್ಲೆಯಲ್ಲಿ ಭೂಮಿಯ ಒಟ್ಟು

(ಶ್ರೀ ಬಿ. ವಿ. ಕಕ್ಕೇರಾಯ)

ಉತ್ಪತ್ತಿಯನ್ನು ನಿರ್ಣಯ ಮಾಡುವಾಗ ಅದರಲ್ಲಿ ಬತ್ತ ಅಷ್ಟೇ ಅಲ್ಲ ಬತ್ತದ ಹುಲ್ಲನ್ನೂ ಕೂಡ ಇಷ್ಟು ಎಂದು ಸೇರಿಸಿ ಒಟ್ಟು ಉತ್ಪತ್ತಿಯನ್ನು ತಹಶೀಲ್ದಾರರು ನಿರ್ಣಯ ಮಾಡಿದ್ದಾರೆ. ಶಾಸನದಲ್ಲಿ ಹುಲ್ಲನ್ನು ಉತ್ಪತ್ತಿಯ ಭಾಗವಾಗಿ ಸೇರಿಸಬಾರದು ಎಂದು ಇದೆ. ಆದರೆ ತಹಸೀಲ್ದಾರರು ಹುಲ್ಲನ್ನು ಕೂಡ ಸೇರಿಸಿ ಎಷ್ಟೋ ಕಡೆ ರೆಕ್ಕೆ ಹಾಕಿ ಅದರಲ್ಲಿ ನಾಲ್ಕನೆಯ ಒಂದು ಅಥವಾ ಐದನೆಯ ಒಂದು ಅಂಶ ಕೊಡಬೇಕೆಂದು ಮಾಡಿದ್ದಾರೆ. ಆದ್ದರಿಂದ ಇವನ್ನೆಲ್ಲಾ ಗಮನಿಸಿ ತಾವು ಮುಂದೆ ತರುವಂತಹ ಮಸೂದೆಯಲ್ಲಿ ಈ ಅಂಶಗಳನ್ನು ಸೇರಿಸಿ ಒಂದು ಮಸೂದೆಯನ್ನು ತರುತ್ತೀರೆಂದು ಭಾವಿಸುತ್ತೇನೆ. ಭೂಕಂದಾಯದ 10 ರಷ್ಟು ರೈತನು ಮಾಲೀಕನಿಗೆ ಕೊಟ್ಟರೆ ಅದು ಎರಡು ವರ್ಷದ ಗೇಣಿಗೆ ಸಮವಾಗುತ್ತದೆಂದು ಈ ತಿದ್ದುಪಡಿಯಲ್ಲಿ ಸೂಚಿಸಿದ್ದೇನೆ. ಎರಡನೆಯದಾಗಿ ಈಗ ಎರಡು ವರ್ಷದ ಗೇಣಿ ಕೊಟ್ಟರೆ, ಕೋರ್ಟುಗಳಲ್ಲಿ ಹೋದಂತಹ ಕೇಸುಗಳು ಇತ್ಯರ್ಥವಾಗುವಾಗ ಅಷ್ಟರಲ್ಲೇ 4–5–6 ವರ್ಷಗಳಾಗಿರುವುದರಿಂದ, ಮುಂದೆ ರೈತನಿಗೆ ಇದರಿಂದ ಬಹಳ ತೊಂದರೆಯಾಗುತ್ತದೆ. ಅದರಿಂದ ಮುಂದೆ ನೀನು ಎರಡು ವರ್ಷದ್ದು ಕೊಡು ಎಂದು ಕಿತ್ತುಕೊಂಡು, ನಂತರ ಮಳೆಗಾಲ ಮುಗಿದ ಕೂಡಲೆ ಪುನಃ ನೀನು ಮೂರು ನಾಲ್ಕು ವರ್ಷದ್ದು ಬಾಕಿಯಾಗಬೇಕೆಂದು ಅವನ ಬೆಳೆ ಜಪ್ತಿ ಮಾಡಿ, ಜಾನುವಾರು, ಫರ್ನಿಚರ್ ಮತ್ತು ಅವನ ಪಾತ್ರೆ ಸಾಮಾನುಗಳನ್ನು ತೆಗೆದುಕೊಂಡು ಹೋಗುವ ಸ್ಥಿತಿ ಬರುತ್ತದೆ. ಆದ್ದರಿಂದ ಅಂಥದ್ದಕ್ಕೆ ಅವಕಾಶ ಕೊಡದೆ 10 ಪಟ್ಟು ಕಂದಾಯದಷ್ಟು ಗೇಣಿ ಕೊಟ್ಟರೆ ಅದರಿಂದ ಹಿಂದಿನ ಏನು ಬಾಕಿ ಇದೆ, ಅದು ಸಂಪೂರ್ಣವಾಗಿ ಮುಕ್ತಾಯವಾಯಿತು ಎಂದಾಗುತ್ತದೆ. ಅದರ ಮೇಲೆ ಜಮೀನ್ದಾರರು ವಸೂಲು ಮಾಡುವುದಕ್ಕೆ ಏನೂ ಅವಕಾಶ ಇರುವುದಿಲ್ಲ. ಈ ದೃಷ್ಟಿಯಿಂದ ಈ ತಿದ್ದುಪಡಿಯನ್ನು ತಂದಿದ್ದೇನೆ.

ಶ್ರೀ ಕಾಗೋಡು ತಿಮ್ಮಪ್ಪ.—ಅಧ್ಯಕ್ಷರೇ, ಶ್ರೀಮಾನ್ ಕಕ್ಕೇರಾಯರು ತಂದಿರತಕ್ಕಂತಹ ತಿದ್ದುಪಡಿಯನ್ನು ನಾನು ಹೃತ್ಪೂರ್ವಕವಾಗಿ ಸ್ವಾಗತಿಸುತ್ತೇನೆ. ಹಾಗೆಯೇ ಇದನ್ನು ನಮ್ಮ ಕಂದಾಯ ಮಂತ್ರಿಯವರು ಒಪ್ಪುತ್ತಾರೆಂದು ನಾನು ಭಾವಿಸುತ್ತೇನೆ. ಇವತ್ತು ರೈತನ ಸ್ಥಿತಿ ಅತ್ಯಂತ ಕರಿಣ ಸ್ಥಿತಿಯಲ್ಲಿದೆ. ರೈತನು ಎರಡು ವರ್ಷದ ಗೇಣಿಯನ್ನು ಒಂದೇ ಮೊತ್ತವಲ್ಲಿ ಕೊಟ್ಟರೆ ಅವನ ಜೀವನವೇ ಹಾಳಾಗುವುದನ್ನು ತಪ್ಪಿಸಬಹುದೆಂದು ಈ ಮಸೂದೆಯನ್ನು ತಂದಿದ್ದಾರೆ. ಆದರೆ ಮೊದಲೇ ಬಡತನದಲ್ಲಿ ನರಳುತ್ತಾ ಇರುವಂತಹ ಗೇಣಿ ರೈತನು ಈ ರೀತಿ ಒಂದೇ ಸಲ ಅಷ್ಟು ಮೊತ್ತವನ್ನು ಕೊಡಲು, ಅವನು ಏನೂ ಸಂಗ್ರಹ ಮಾಡಿಕೊಂಡಿಲ್ಲ. ಅವನ ಜೀವನ ಹಾಳಾಗಿದೆ. ಇವತ್ತು ಅವನಿಗೆ ಅದರ ಅರ್ಧಷ್ಟು ಗೇಣಿ ಕೂಡ ಕೊಡಲು ಶಕ್ತಿ ಇಲ್ಲ. ಅದಕ್ಕೆ ಇನ್ನೊಂದು ಕಾರಣವೂ ಇದೆ. ಮೊದಲು ಗಾಂಧೀಜಿಯವರು ಉಳುವವನೇ ಭೂಮಿಯ ಒಡೆಯನಾಗಬೇಕೆಂದು ಘೋಷಣೆಯನ್ನು ಮಾಡಿದ್ದರು. ಬಹುಶಃ ಸ್ವಾತಂತ್ರ್ಯ ಬಂದ ತಕ್ಷಣ ದೇಶದಲ್ಲಿ ಈ ಭೂಸುಧಾರಣೆಯನ್ನು ಜಾರಿಗೆ ಕೊಟ್ಟಿದ್ದರೆ ಇವೊತ್ತಿನ ದಿವಸ ಎಲ್ಲಾ ರೈತರು ಭೂಮಿಯ ಒಡೆಯರಾಗುತ್ತಿದ್ದರು. ಆದರೆ ಸ್ವಾತಂತ್ರ್ಯ ಚಳವಳಿಗಳಲ್ಲಿ ಜಮೀನ್ದಾರರೇ ಹೆಚ್ಚಾಗಿ ಮುಖಂಡತ್ವವನ್ನು ವಹಿಸಿಕೊಂಡಿದ್ದರಿಂದ ಗೇಣಿದಾರನು ಗೇಣಿದಾರನಾಗಿಯೇ ಉಳಿಯಬೇಕಾಯಿತು. ಈ ಕೆಲಸವನ್ನು ಹಿಂದೆಯೇ ಮಾಡಿದ್ದರೆ ಇವೊತ್ತಿನ ದಿವಸ ಗೇಣಿದಾರನು ಭೂಮಾಲಿಕನಾಗಿ 25 ವರ್ಷ ಗೇಣಿ ತೆರಬೇಕಾದ ಪ್ರಮೇಯ ಬರುತ್ತಿರಲಿಲ್ಲ. ಆದರೆ ಸ್ವಾತಂತ್ರ್ಯ ಸಮಯದಲ್ಲಿ ಮಾಡಿದ ಭರವಸೆಗಳ ಬಗ್ಗೆ ರೈತನಿಗೆ ಯಾವ ಒಂದು ತಿಳಿವಳಿಕೆಯೂ ಬರದ ಹಾಗೆ ಮಾಡಿದ್ದಾರೆ. ಆದ್ದರಿಂದ ಜಮೀನ್ದಾರರೇ ಹೆಚ್ಚಿನ ಅನುಕೂಲಗಳನ್ನು ಪಡೆದುಕೊಂಡು ಗೇಣಿದಾರರು ಗೇಣಿದಾರರಾಗಿಯೇ ಉಳಿಯುವಂತಾಯಿತು. ಆದ್ದರಿಂದ ಪುನಃ ಅವನ ಮೇಲೆ ಹೊರೆ ಹೊರಿಸಲು ಏನೂ ಅವನಲ್ಲಿ ಇಲ್ಲ. ಆದಕಾರಣ ಅವನು ಕಂದಾಯದ 10 ರಷ್ಟು ಪಟ್ಟು ಗೇಣಿಯನ್ನು ಕೊಟ್ಟರೆ ಹಾಗೋ ಹೀಗೋ ಅಲ್ಪ ಸ್ವಲ್ಪ ಕೂಡಿಸಿ ತನ್ನ ಜಮೀನನ್ನು ಉಳಿಸಿಕೊಳ್ಳಲು ಸಾಧ್ಯವಾಗುತ್ತದೆ. ನಮ್ಮ ಮಂತ್ರಿಯವರು ಒಂದು ಸಮಗ್ರವಾದ ಭೂಸುಧಾರಣೆಯನ್ನು ತರುತ್ತೇವೆ ಮತ್ತು ರೈತನನ್ನೇ ಭೂಮಿಯ ಒಡೆಯನನ್ನಾಗಿ ಮಾಡುತ್ತೇವೆಂದು ಹೇಳುತ್ತಿದ್ದಾರೆ. ಅದರ ಬಗ್ಗೆ ಕರಡು ಶಾಸನ ಕೂಡ ತಯಾರಾಗಿದೆ ಎಂದು ಹೇಳುತ್ತಿರುವಾಗ ಇನ್ನು ಕೆಲವೇ ಸಮಯದಲ್ಲಿ ಅದು ನಮ್ಮ ಮುಂದೆ ಬರಲಿದೆ. ಹಾಗಿರುವಾಗ ಅವನಿಗೆ ಕಂದಾಯದ 10 ರಷ್ಟು ಕೊಡಿ ಎಂದು ಹೇಳಿದರೆ ರೈತನಿಗೆ ಮತ್ತಷ್ಟು ಖುಷಿಯಾಗುತ್ತದೆ. ಈ ರೀತಿಯ ಒಂದು ಸದವಕಾಶವನ್ನು ನಿಮ್ಮ ಕಾಲದಲ್ಲಾದರೂ ಆಗಲಿ ಕಾಣಲಿ ಎಂದು ನಾನು ಅಪೇಕ್ಷೆ ಪಡುತ್ತೇನೆ. ಏಕೆಂದರೆ ಈ ರೀತಿಯ ಒಂದು ಅವಕಾಶ ಮುಂಬಾಯಿ ಕಾನೂನಿನಲ್ಲಿ ಹಿಂದೆ ಇತ್ತು. ಅಲ್ಲಿ ಕಂದಾಯದ 6 ರಷ್ಟು ಕೊಟ್ಟರೆ ಸಾಕಾಗಿತ್ತು. ಆದರೆ ನಮ್ಮ ವಿಶಾಲ ಕರ್ನಾಟಕವಾದ ಮೇಲೆ ಆ ಪ್ರದೇಶದ ಜನರು ಆ ಒಂದು ಸವಲತ್ತನ್ನು ಸಹ ಕಳಕೊಂಡರು. ಆದ್ದರಿಂದ ಈ ರೀತಿ

ಕಂದಾಯದ 10 ರಷ್ಟು ಗೇಣಿಯನ್ನು ರೈತನು ಎರಡು ವರ್ಷದಲ್ಲಿ ಕೊಡುವ ಒಂದು ಅವಕಾಶ ಮಾಡಿಕೊಡುವುದಕ್ಕೋಸ್ಕರ ಈ ತಿದ್ದುಪಡಿಯನ್ನು ಒಪ್ಪಿಕೊಂಡು ಗೇಣೀದಾರರಿಗೆ ಒಂದು ರಕ್ಷಣೆಯನ್ನು ಕೊಡಬೇಕೆಂದು ಕೇಳಿಕೊಂಡು ನನ್ನ ಎರಡು ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಟಿ. ಎಂ. ಮಂಜುನಾಥ್.—ಮಾನ್ಯ ಅಧ್ಯಕ್ಷರೇ, ಸರ್ಕಾರದವರು ಏನೊಂದು ಮಸೂದೆಯನ್ನು ತಂದಿದ್ದಾರೆ ಅದನ್ನು ಪ್ರತಿಪಾದನೆ ಮಾಡುತ್ತಾ ಈಗ ಕಕ್ಕಿರಾಲ್ಲಯರು ತಂದಿರತಕ್ಕ ತಿದ್ದುಪಡಿಯ ಬಗ್ಗೆ ನಾಲ್ಕು ಮಾತುಗಳನ್ನು ಹೇಳಬಯಸುತ್ತೇನೆ. ಈಗ ಸಮಗ್ರವಾದ ಭೂಸುಧಾರಣೆ ತರಬೇಕಾದರೆ ಗೇಣೀದಾರರ ಮತ್ತು ಭೂಮಾಲಕರ ಸಂಬಂಧ ಪೂರ್ಣವಾಗಿ ಕಡಿದು ಹೋಗುತ್ತಿದೆ. ಭೂಮಾಲಿಕರು ತಮ್ಮ ಕುಟುಂಬವನ್ನು ಕಾಪಾಡುವುದಕ್ಕೋಸ್ಕರ, ಮತ್ತು ಮುಕ್ಕಳ ವಿದ್ಯಾಭ್ಯಾಸವನ್ನು ಮಾಡಿಸುವುದಕ್ಕೋಸ್ಕರ ಇರತಕ್ಕ ಸ್ವಲ್ಪ ಭೂಮಿಯನ್ನು ಗೇಣಿಗೆ ಕೊಟ್ಟು ಪಟ್ಟಣವನ್ನು ಸೇರಿಯತ್ತಾರೆ. ಆದರೆ ಭೂಮಿಯ ಎರ್ಲಾ ಹಕ್ಕನ್ನು ಗೇಣೀದಾರನು ಹೊಂದುತ್ತಿರುವ ಸಂದರ್ಭದಲ್ಲಿ ಮಾಲೀಕನಿಗೆ 10 ವರ್ಷದ ಕಂದಾಯದ ರೂಪದಲ್ಲಾಗಲಿ, ಅಥವಾ ಇನ್ನಿತರ ರೂಪದಲ್ಲಾಗಲಿ ಕೊಡುವಾಗ, ಅದರಿಂದ ಸ್ವಲ್ಪ ಕಷ್ಟವಾಗುವುದು ಸಹಜ. ಏಕೆಂದರೆ ಭೂಮಾಲಿಕನಿಗೆ ಇನ್ನಲ್ಲಿರುವ ಭೂಮಿಯು ಸಾಕಷ್ಟು ಕಷ್ಟ ನಷ್ಟಗಳನ್ನು ಅನುಭವಿಸಿ ಪಡೆದಂತಹ ಭೂಮಿಯಾಗಿರುತ್ತದೆ ಅಲ್ಲದೆ ಆ ಭೂಮಿಗೋಸ್ಕರ ಅವರು ಬಹಳ ಶ್ರಮವನ್ನು ಹಾಕಿ ಪಡೆದಿರುತ್ತಾರೆ. ಆದರೆ ಅಂತಹ ಭೂಮಿಗಳನ್ನು ಇವತ್ತು ಗೇಣೀದಾರರಿಗೆ ಕೊಡುವುದಕ್ಕೆ ಹೊರಟಿದ್ದಾರೆ. ಅದ್ದರಿಂದ ಇದನ್ನು ವಿಲೇವಾರಿ ಮಾಡುವಾಗ ಭೂಮಾಲಕನಿಗೆ ಸಾಕಷ್ಟು ಸಂತೃಪ್ತಿಯನ್ನು ಉಂಟು ಮಾಡುವಂತೆ ಮಾಡಿ ವಿತರಣೆ ಮಾಡಬೇಕು. ಏಕೆಂದರೆ ನಮ್ಮ ದೇಶದಲ್ಲಿರತಕ್ಕ ಜನ ಎಲ್ಲರೂ ಒಂದೆ. ಅವರಲ್ಲಿ ಕೆಲವರು ಅಲ್ಪ ಸಂಖ್ಯಾತರು ಇರಬಹುದು ; ಕೆಲವರು ಜಾಸ್ತಿ ಸಂಖ್ಯಾತರು ಇರಬಹುದು. ಆದ್ದರಿಂದ ಒಬ್ಬರ ಮನಸ್ಸನ್ನು ನೋಯಿಸದ ರೀತಿಯಲ್ಲಿ ಭೂಮಿಯ ಋಣವನ್ನು ಭೂಮಾಲಕರಿಗೆ ಅರ್ಪಿಸಬೇಕಾಗಿದೆ. ಅದಕ್ಕೆ ಸರ್ಕಾರ ತಂದಿರತಕ್ಕ ಮಸೂದೆ ನಿಜವಾದ ರೀತಿಯಲ್ಲಿ ಅನ್ವಯಿಸುವ ಹಾಗೆ ಇದೆ. ಆದ್ದರಿಂದ ನಾನು ಸರ್ಕಾರ ತಂದಿರತಕ್ಕ ಮಸೂದೆ ಸರಿಯಾದುದೆಂದು ಹೇಳುತ್ತೇನೆ. ಇಲ್ಲಿ ಭೂಕಂದಾಯದ 10 ರಷ್ಟು ಕೊಟ್ಟರೆ ಸಾಕು ಎಂದು ಹೇಳಿ ತಿದ್ದುಪಡಿ ತಂದಿದ್ದಾರೆ. ಆದರೆ ನಮಗ್ರ ಭೂಸುಧಾರಣೆಯನ್ನು ಕೂಡಲೇ ಜಾರಿಗೆ ತಂದರೆ ಅದರಿಂದ ಗೇಣೀದಾರರಿಗೆ ತಕ್ಷಣ ಭೂಮಿ ಸಿಗುವಂತಾಗುತ್ತದೆ. ಆದ್ದರಿಂದ ಸರ್ಕಾರ ತಂದಿರತಕ್ಕ ಮಸೂದೆಯನ್ನು ಪ್ರತಿಪಾದಿಸಿ ನನ್ನ ನಾಲ್ಕು ಮಾತುಗಳನ್ನು ಮುಗಿಸುತ್ತೇನೆ.

† ಶ್ರೀ ಟಿ. ಆರ್. ಶಾಮಣ್ಣ.—ಮಾನ್ಯ ಸಭಾಧ್ಯಕ್ಷಿಣಿಯವರೇ, ಈ ದಿನ ಶ್ರೀಯುತ ಕಕ್ಕಿರಾಯ ಅವರು ತಂದಿರತಕ್ಕ ತಿದ್ದುಪಡಿಯನ್ನು ನಾನು ವಿರೋಧಿಸತಕ್ಕ ಉದ್ದೇಶವನ್ನು ಹೊಂದಿದ್ದೇನೆ. ಈಗ ಇದರ ಬಗ್ಗೆ ಒಂದು ನಿರ್ಣಯವನ್ನು ಮತ್ತು ಲ್ಯಾಂಡ್ ರೆವಿನ್ಯೂಗೆ ಸಂಬಂಧಪಟ್ಟ ತಿದ್ದುಪಡಿಯನ್ನು ತಂದಿರುವವರು ಬಹಳ ಪ್ರಗತಿಶೀಲರು ಎಂಬುದಾಗಿ ಹೇಳಿಕೊಳ್ಳುತ್ತಾರೆ. ಈ ನಿರ್ಣಯವನ್ನು ಸರ್ಕಾರದವರು ಒಂದು ವೇಳೆ ಒಪ್ಪಿಕೊಂಡರೆ ನಿಜವಾಗಿ ಅವರು ಹೆಚ್ಚಿನ ಪ್ರಗತಿಶೀಲರೆಂಬ ಒಂದು ಬಿರುದನ್ನು ಪಡೆದುಕೊಳ್ಳುವ ಅವಕಾಶ ಅವರಿಗೆ ಸಿಗುತ್ತದೆ. ಆದರೆ ಈ ವಿಚಾರದಲ್ಲಿ ನನ್ನ ಉದ್ದೇಶವಾದರೂ ಇಷ್ಟೇ. ಏಕೆ ಯಾವಾಗಲೂ ಸರ್ಕಾರದವರು ಕೇವಲ ಬಡ ಜಮೀನ್ದಾರರ ಮೇಲೆಯೇ ಅವರ ಬ್ರಹ್ಮಾಸ್ತ್ರವನ್ನು ಬೀರುತ್ತಿದ್ದಾರೋ ಗೊತ್ತಿಲ್ಲ. ಈ ರೀತಿಯಾಗಿ ಆಗಾಗ್ಗೆ ಬದಲಾವಣೆಗಳನ್ನು ಮಾಡುವುದಕ್ಕೆ ಬದಲಾಗಿ ಒಂದೇ ಸಾರಿ ಒಂದು ನಿರ್ಣಯವನ್ನು ತೆಗೆದುಕೊಂಡು ಬನ್ನಿ. ಅದು ಹೇಗೆಂದರೆ, ಯಾವನಾದರೂ 10 ವರ್ಷಗಳ ಕಾಲ ಕಾರ್ ಡ್ರೈವ್ ಮಾಡಿದರೆ ಆ ಕಾರು ಅವನಿಗೇ. ಸುಮಾರು 8 ವರ್ಷಗಳ ಕಾಲ ಒಂದು ಮನೆಯಲ್ಲಿ ವಾಸವಾಗಿದ್ದರೆ ಆ ಮನೆ ಅವನಿಗೆ ; ಯಾವುದಾದರೂ ಫ್ಯಾಕ್ಟರಿಯಲ್ಲಿ 20 ವರ್ಷಗಳ ಕಾಲ ಕೆಲಸ ಮಾಡಿದರೆ, ಆ ಫ್ಯಾಕ್ಟರಿಯ ಮಾಲೀಕ ಅವನೇ ; 10 ವರ್ಷಗಳ ಕಾಲ ಬಸ್‌ನಲ್ಲಿ ಪ್ರಯಾಣ ಮಾಡಿದರೆ ಸಾಕು, ಆವನೇ ಆ ಬಸ್ಸಿನ ಮಾಲೀಕ ; ವಿಧಾನಸೌಧದಲ್ಲಿ 10 ವರ್ಷಗಳ ಕಾಲ ಕೆಲಸ ಮಾಡಿದರೆ, ವಿಧಾನಸೌಧದ ಮಾಲೀಕ ಅವನೇ ಎಂದು ಹೇಳುವ ಹಾಗೆ ಈಗಿನ ಪರಿಸ್ಥಿತಿ ಬರುತ್ತಿದೆ. ಹೀಗೆ ಏನಾದರೂ ಒಟ್ಟಿಗೆ ಮಾಡಿಬಿಡಿ. ಆ ರೀತಿ ಮಾಡದೆ ನಮ್ಮನೆ ಚಿಲ್ಲರೆ ಪಲ್ಲರೆ ಏಕೆ ಮಾಡುತ್ತೀರಾ ? ನಾನು ಮೊದಲೇ ಹೇಳಿದ ಹಾಗೆ ರೈತನನ್ನು ಹಾಗೂ ಬಡವನನ್ನು ಪದೇಪದೇ ಚುಚ್ಚಿ ಚುಚ್ಚಿ ತೆರಿಗೆ ಹೆಚ್ಚಿಗೆ ಕೊಡಬೇಕೆಂದು ಕೇಳಬೇಡಿ. ಈಗ ನಿಮ್ಮ ನೀತಿ ಏನಾಗುತ್ತದೆಯೆಂದರೆ, ಹೊಚ್ಚೆ ಬಟ್ಟೆಗೆ ನೋಡಿಕೊಳ್ಳುವ ಜವಾಬ್ದಾರಿ ನಿಮ್ಮದು, ವಿದ್ಯಾಭ್ಯಾಸ ಪಡೆಯುವ ಜವಾಬ್ದಾರಿ ನಿಮ್ಮದು ಕೆಲಸವನ್ನೂ ಒದಗಿಸಿಕೊಳ್ಳುವ ಜವಾಬ್ದಾರಿ ನಿಮ್ಮದು, ನಿಮ್ಮ ಸಂಪಾದನೆ ಹೇಗಾದರೂ ಮಾಡಿಕೊಳ್ಳಿ, ಕೆಲಸವನ್ನು ಎಲ್ಲಿಯಾದರೂ ಒದಗಿಸಿಕೊಳ್ಳಿ, ನಾವು ನಮ್ಮ ರಷ್ಯಾ ದೇಶವನ್ನು ಅನುಸರಿಸಿ, ಅಲ್ಲಿನ ನಮ್ಮ ಮಿತ್ರರು ಹೇಳಿದ ಹಾಗೆ ಮಾಡಿಕೊಂಡು ಹೋಗುತ್ತೇವೆಂಬಂಥ ಒಂದು ನಿರ್ಣಯ

(ಶ್ರೀ ಟಿ. ಆರ್. ಶಾಮಣ್ಣ)

ತೆಗೆದುಕೊಂಡು ಬಂದಂತಿದೆ. Russia is co-opartner of India ಎಂದು ಹೇಳುವಾಗ ಅವರ ಜೊತೆಗೇನೀವೂ ಸೇರಿಕೊಂಡು ನಿರ್ಣಯ ಮಾಡಿ ಎಂಬುದಾಗಿ ಹೇಳುತ್ತಿದ್ದೀರಿ. ಈ ರೀತಿ ಯಾಗಿ ನಿರ್ಣಯಗಳನ್ನು ಈ ಸಭೆಯಲ್ಲಿ ತರುವುದರಿಂದ ಏನೂ ಪ್ರಯೋಜನವಾಗುವುದಿಲ್ಲ, ಒಳ್ಳೆಯ ದಾಗುವುದಿಲ್ಲ. ಇದು ಬರೀ ಜನಗಳ ಗಮನವನ್ನು ಸೆಳೆದು ನಿಮ್ಮ ಒಂದು ಪ್ರತಿಷ್ಠೆಯನ್ನು ಬೆಳೆಸು ಕೊಳ್ಳುತ್ತಿದ್ದೀರಿ ಎಂಬುದಕ್ಕೆ ಎಡೆ ಕೊಟ್ಟಹಾಗಾಗುತ್ತದೆ. ಇಂಥಾದ್ದರಿಂದ ಏನೂ ಪ್ರಯೋಜನ ವಾಗುವುದಿಲ್ಲ. ಅದಕ್ಕಾಗಿ ಈ ನಿರ್ಣಯವನ್ನು ಈ ಸಭೆಯಲ್ಲಿ ತೆಗೆದುಕೊಳ್ಳುವುದಕ್ಕೆ ಸಾಧ್ಯವಿಲ್ಲ ವೆಂದು ಹೇಳುತ್ತೇನೆ.

†ಶ್ರೀ ಕೋಣಂದೂರು ಲಿಂಗಪ್ಪ (ತೀರ್ಥಹಳ್ಳಿ).—ಮಾನ್ಯ ಅಧ್ಯಕ್ಷಣಿಯವರೇ, ಸನ್ಮಾನ್ಯ ಹಿರಿಯ ಸದಸ್ಯರಾದಂಥ ಶ್ರೀಮಾನ್ ಶಾಮಣ್ಣನವರು ಏನು ತಮ್ಮ ಅಭಿಪ್ರಾಯಗಳನ್ನು ಈ ಸಭೆ ಯಲ್ಲಿ ಈಗ ವ್ಯಕ್ತಪಡಿಸಿದ್ದಾರೋ ಅದು ಓಬೀರಾಯನ ಕಾಲದ್ದು. ಸಾಮಾನ್ಯವಾಗಿ ಈಗ ಶ್ರೀಮಂತವರ್ಗಕ್ಕೆ ಕೋಟಿ ಕೋಟಿ ಜನರ ದುಃಖದ ಮನ ಗೊತ್ತಿಲ್ಲ. ಅಂತಹ ಜನ ಕೋಟಿಗಟ್ಟಲೆ ಏನಿದ್ದಾರೋ ಅವರೆಲ್ಲರೂ ತಮ್ಮ ಸೇವೆ ಮಾಡುವುದಕ್ಕೋಸ್ಕರ ತಮ್ಮ ಜೀವನದಲ್ಲಿ ಧುಮುಕಿ ದುಡಿದು ಹೋಗುವ ಪಶುಗಳು ಎಂಬುದಾಗಿ ತಿಳಿದುಕೊಂಡಿದ್ದಾರೆ. ಅಂತಹವರು ಈ ರಾಷ್ಟ್ರದಲ್ಲಿ ಕೇವಲ 40 ಲಕ್ಷ ಜನರು ಇದ್ದಾರೆ. ನಮ್ಮ ರಾಷ್ಟ್ರದಲ್ಲಿ ಇರುವ 54½ ಕೋಟಿ ಜನರಲ್ಲಿ ಯಾವ ಭಾಗದ ಜನರು ಮುಂದುವರಿದವರಿದ್ದಾರೆ. ಹಾಗೂ ಸುಖಗಿರಿ ಶೃಂಗದೆಸೆಯಲ್ಲಿ ನಲಿದಾಡುತ್ತಿರತಕ್ಕ ಬಂಡವಾಳಷಾಹಿಗಳು ಯಾರಿದ್ದಾರೆ. ಅಂತಹವರು ಗೇಣಿದಾರರ ಹಾಗೂ ಬಡವರ ಕಷ್ಟನಷ್ಟ ಗಳೇನೆಂಬುದನ್ನು ನಿಜವಾಗಿ ಅರ್ಥಮಾಡಿಕೊಳ್ಳದೇ ಹೋದರೆ, ಅವರನ್ನು ಸುಸಂಸ್ಕೃತರನ್ನಾಗಿ ಮಾಡದೇ ಹೋದರೆ ಖಂಡಿತವಾಗಿ ಎಲ್ಲರೂ ವಿಷಾದವನ್ನು ವ್ಯಕ್ತಪಡಿಸಬೇಕಾಗುತ್ತದೆ. ಈ ವಿಚಾರ ದಲ್ಲಿ ಇನ್ನು ಹೆಚ್ಚಿಗೆ ನಾನು ಹೇಳುವುದಿಲ್ಲ. ಇವತ್ತು ನಮ್ಮ ನಾಡಿನಲ್ಲರತಕ್ಕ ಗೇಣೀ ರೈತನ ಪರಿಸ್ಥಿತಿಯನ್ನು ಮಾನ್ಯ ಶ್ರೀ ಕಾಗೋಡು ತಿಮ್ಮಪ್ಪನವರು ಬಹಳ ಚೆನ್ನಾಗಿ ವಿವರಿಸಿದ್ದಾರೆ. ಇವತ್ತು ಎರಡು ವರ್ಷಗಳ ಗೇಣಿಯನ್ನು ರೈತನಾದವನು ಒಟ್ಟಿಗೆ ಕೊಡಬೇಕೆಂದು ಒಂದು ನಿರ್ಣಯವನ್ನು ತಂದು ನಿಜವಾಗಿಯೂ ಗೇಣಿದಾರನಿಗೆ ಬಹಳ ಅನ್ಯಾಯವನ್ನು ಬಗೆದಿದ್ದಾರೆ. ಇವತ್ತಿನ ದಿವಸ ಒಂದು ಹೊತ್ತು ಹೊಟ್ಟೆಗೆ ಇಲ್ಲದೇ ಇರತಕ್ಕ ರೈತ ಎರಡು ವರ್ಷಗಳ ಗೇಣಿಯನ್ನು ಹೇಗೆ ಕೊಡಬೇಕು? ನಿಜವಾಗಿಯೂ ಅವನಿಂದ ಅದನ್ನು ಕೊಡುವುದಕ್ಕಾಗುವುದಿಲ್ಲ. ನಾವು ನಿಜವಾಗಿ ಅವನ ಪರಿಸ್ಥಿತಿಯ ಬಗ್ಗೆ ವಾಸ್ತವಾಂಶವೇನೆಂಬುದನ್ನು ಅರ್ಥಮಾಡಿಕೊಳ್ಳಬೇಕು. ಇಂತಹ ಪರಿಸ್ಥಿತಿ ಗೇಣೀ ರೈತನಿಗೆ ಇರುವಾಗ ಅವನು ಒಟ್ಟಿಗೆ ಎರಡು ವರ್ಷಗಳ ಗೇಣಿಯನ್ನು ಪಾವತಿ ಮಾಡಬೇಕೆಂದು ಭಾರ ಹೊರಿಸುವುದು ಯೋಗ್ಯವಾದುದಲ್ಲ. ಅದಕ್ಕಾಗಿ ಮಾನ್ಯ ಶ್ರೀ ಕಕ್ಕಿರಾಯ ಅವರು ತಂದಿರುವ ತಿದ್ದುಪಡಿ ಏನಿದೆಯೋ ಅದನ್ನು ಒಪ್ಪಿಕೊಳ್ಳುವುದರ ಮೂಲಕ ಗೇಣೀ ರೈತನಿಗೆ ಅನುಕೂಲಮಾಡಿಕೊಡಬೇಕೆಂದೂ, ಮತ್ತು ಅವನು ಆ ಗೇಣಿಯನ್ನು ಕಂತಿನ ಮೂಲಕ ಕೊಡಬೇಕೆಂದು ಮಾಡಿದರೆ ಬಹಳ ಒಳ್ಳೆಯದು. ಏಕೆಂದರೆ ಭೂಮಿ ಹುಟ್ಟಿದ ರಾಗಾ ಯಿತು ಗೇಣಿ ರೈತ ಗೇಣಿಯನ್ನು ಕೊಟ್ಟುಕೊಂಡೇ ಬಂದಿದ್ದಾನೆ. ಬೇಕು ಬೇಕಾದವರಿಗೆಲ್ಲರಿಗೂ ಬೇಕಾದಷ್ಟು ಸಾರಿ ನಲಾಮು ಹೊಡೆದಿದ್ದಾನೆ. ಅವರನ್ನು ಹೊಡೆದವರು ನಾವು ಇದ್ದೇವೆ ಹೊಡಸಿಕೊಂಡವರು ಅವರು ಹಾಗೆಯೇ ಕಷ್ಟಪಟ್ಟುಕೊಂಡು ಗೇಣಿಯನ್ನು ಕೊಡುತ್ತಲೇ ಬಂದಿದ್ದರೂ ಇನ್ನೂ ಕಡು ಬಡವರಾಗಿಯೇ ಇದ್ದಾರೆ. ಅಂತಹವರು ಈಗ ಮುಂದುವರಿಯಬೇಕು ಎನ್ನುವ ಒಂದು ಪುನೀತಭಾವ ಏನಿದೆ ಅದನ್ನು ಕೈಗೂಡಿಸಬೇಕು. ಇಲ್ಲದಿದ್ದರೆ ಇಂತಹ ನಾಗರಿಕ ಯುಗ ದಲ್ಲಿ ಅವರನ್ನು ಅನಂಸ್ಕೃತರನ್ನಾಗಿ ಮಾಡಿ ಅನಾಗರೀಕರೆಂದು ಅವಮಾನಪಡಿಸುವುದು ಸರಿಯಲ್ಲ. ಏಕೆಂದರೆ ಇದು ಧರ್ಮಸಂಕಟದ ವಿಷಯ. ಮಾನ್ಯ ಮುಖ್ಯಮಂತ್ರಿಗಳಿಗೂ ಮತ್ತು ಮಾನ್ಯ ಶ್ರೀ ಹುಚ್ಚಮಾಸ್ತಿಗೌಡರಿಗೂ ಇದು ಗೊತ್ತಿದೆ 1956ನೇ ಇಸವಿಯಲ್ಲಿಯೇ ಗೇಣೀ ಶಾಸನವನ್ನು ನಮ್ಮ ಹಿರಿಯರಾದಂಥ ಶ್ರೀಮಾನ್ ಕಡಿದಾಳ್ ಮಂಜಪ್ಪನವರು ಈ ಶಾಸನಸಭೆಯಲ್ಲಿ ತಂದಿದ್ದರು. ಅದಕ್ಕೆ ಅಡ್ಡಗಲ್ಲು ಕೊಟ್ಟವರು ನಿಮ್ಮ ಕಾಂಗ್ರೆಸ್‌ನಲ್ಲಿರುವವರೇ. ಅವರು ಇಲ್ಲಿಯೂ ಇರಬಹುದು, ಅಲ್ಲಿಯೂ ಇರಬಹುದು. ಈ ಕಡೆ ಮತ್ತು ಆ ಕಡೆ ಅನೇಕರು ಹೊಸಬರಿದ್ದಾರೆ. ಅವರಲ್ಲಿ ಅನೇಕರು ನಿಮ್ಮ ಕಡೆಯೂ ನಮ್ಮ ಕಡೆಯೂ ತೋಳು ಹಿಡಿದು ಎಳೆಯುವವರು ಇದ್ದಾರೆ. ತಾವು ನಾಳೆ ಸ್ಟ್ಯಾಂಡರ್ಡ್ ಎಕರೆಯನ್ನು ನಿಗದಿಮಾಡುವಾಗ ಯಾವ್ಯಾವ ಹೆಗ್ಗಣಗಳು ಸುರಂಗದಲ್ಲಿ ಏನೇನು ಮಾಡುತ್ತವೆಂಬುದನ್ನು ನೀವು ಮನಗಾಣುತ್ತೀರಿ. ಅಂತಹ ಸುರಂಗಗಳಿಗೆ ಸಿಮೆಂಟ್ ಹಾಕುವುದಕ್ಕೆ ನಾವು ನಿಜವಾಗಿಯೂ ಪ್ರಯತ್ನಮಾಡುತ್ತೇವೆ. ಆದ್ದರಿಂದ ತಾವು ಸ್ಟ್ಯಾಂಡರ್ಡ್

ಎಕರೆಯನ್ನು ಎಕರೆ ಗುಂಟೆಗಳಲ್ಲಿ ಬಹಳ ಸ್ಪಷ್ಟವಾಗಿ ನಿಗದಿಮಾಡಬೇಕಾಗುತ್ತದೆ. ಅನೇಕ ಜನರು ನಿಮ್ಮ ಒಂದು ನಿಲುವನ್ನು ತುಂಬಾ ದಿಟ್ಟತನದಿಂದ ನೋಡಲು ಕಾದಿದ್ದಾರೆ. ನಮ್ಮ ಪೂಜ್ಯ ಗುರು ಮಾನ್ಯ ಶ್ರೀ ಗೋಪಾಲಗೌಡರು ಯಾವಾಗಲೂ ಯಾವ ಗೇಣಿ ರೈತನ ಹಿತಸಂರಕ್ಷಣೆ ಗೋಸ್ಕರವಾಗಿ ದುಡಿಯುತ್ತಿದ್ದರೋ ಅಂತಹವರ ಹಿತಸಂರಕ್ಷಣೆಗೋಸ್ಕರ ಈ ಸಭೆಯಲ್ಲಿ ತಿಮ್ಮಾಪಡಿ ಮಸೂದೆಯನ್ನು ಮಂಡಿಸುವ ಸುದಿನ ಅದಷ್ಟು ಜಾಗ್ರತೆಯಾಗಿ ಬರಲಿ ಎಂಬುದಾಗಿ ನಾನು ಹೇಳುತ್ತೇನೆ. ಆದರೆ ತಮಗೆ ಬೇಕಾದಹಾಗೆ ಸುರಂಗಗಳನ್ನು ಇಟ್ಟುಕೊಂಡು ಯಥಾಪ್ರಕಾರ ಬಂಡವಾಳಷಾಹಿಗಳಿಗೆ ಅತ್ಯೀಯವಾಗಿರುವುದಕ್ಕಾಗಿ ಅವರಿಗೆ ಬೇಕಾದಷ್ಟು ಸೌಲಭ್ಯಗಳನ್ನು ಒದಗಿಸತಕ್ಕಂಥ ಜಾಣತನದ, ಅತಿ ಬುದ್ಧಿವಂತಿಕೆಯ ಕಾನೂನನ್ನು ನಿಜವಾಗಿ ಇಲ್ಲಿ ತರಬೇಡಿ. ಆ ಬಗ್ಗೆ ತಾವು ಎಚ್ಚರವನ್ನು ವಹಿಸಬೇಕು. ಈ ವಿಚಾರದಲ್ಲಿ ಮಾನ್ಯ ಮುಖ್ಯಮಂತ್ರಿಗಳಿಗೂ ಮತ್ತು ರೆವೆನ್ಯೂ ಮಂತ್ರಿಗಳಿಗೂ ಮೈಯೆಲ್ಲಾ ಕಣ್ಣು, ಕವಿಯಾಗಿದ್ದಂತಿರಬೇಕು. ಆ ರೀತಿಯಾಗಿಯೇ ಅಂತಹ ಸಂದರ್ಭದಲ್ಲಿ ಇರುತ್ತಾರೆಂದು ನನಗೆ ಸಂಪೂರ್ಣ ವಿಶ್ವಾಸವಿದೆ. ಆದರೆ ನಿಮ್ಮ ಕಣ್ಣನ್ನು ಕುಟುಕತಕ್ಕ ಹಾಗೂ ನಿಮ್ಮ ಕವಿಯನ್ನು ಕುರುಡು ಮಾಡತಕ್ಕ ಸಾಧನಗಳು, ಸಲಕರಣೆಗಳೂ, ವ್ಯಕ್ತಿಗಳೂ ನಿಮ್ಮ ಪಕ್ಷದಲ್ಲಿ ಇರಬಹುದು. ಆದ್ದರಿಂದ ಅದರ ಬಗ್ಗೆ ಎಚ್ಚರದಿಂದ ಇರಬೇಕು. ಇವತ್ತು ಗೇಣಿ ಕಾನೂನನ್ನು ಜಾರಿಗೆ ತರುತ್ತಿದ್ದೀರಿ. ಅದರ ಬಗ್ಗೆ ಈಗಾಗಲೇ ಒಂದು ಹೇಳಿಕೆಯನ್ನು ತಾವು ಕೊಟ್ಟಿದ್ದರಿಂದ ಬೇಕಾದಷ್ಟು ಜನರು ಗೇಣಿ ರೈತರನ್ನು ದಿನ ಬೆಳಿಗ್ಗೆಯಾದರೆ ಒಕ್ಕಲೆಬ್ಬಿಸುವ ಪ್ರಯತ್ನವಾಗುತ್ತಿದೆ. ಇಂತಹ ಒಂದು ಸಂದರ್ಭದಲ್ಲಿ ತಕಾವಿ ಲೋನ್ ಎಂಬುದಾಗಿ ಏನು ರೈತ ಬೆಳೆದ ಬೆಳೆಯ ಮೇಲೆ ಸರ್ಕಾರದವರು ಕೊಡುತ್ತಿದ್ದರೋ ಅದನ್ನೂ ಕೂಡ ಈಗ ನಿಲ್ಲಿಸಿದ್ದಾರೆ. ಅದನ್ನು ಏತಕ್ಕೆ ನಿಲ್ಲಿಸಿದರೋ ಗೊತ್ತಿಲ್ಲ. ಗೇಣಿ ರೈತರಿಗೆ ಯಾವಾಗಲೂ ಉಪಕಾರ ಮಾಡುತ್ತೇವೆಂದು ಹೇಳುವವರು ಉಳುವವನೇ ಹೊಲದ ಒಡೆಯನಾಗ ಬೇಕೆನ್ನುವಾಗ ಅದಕ್ಕೆ ಬೇಕಾದ ಸೌಕರ್ಯಗಳನ್ನು ಅದಷ್ಟು ಬೇಗ ರೈಣಿ ರೈತರಿಗೆ ಸರ್ಕಾರ ಮಾಡಿಕೊಡಬೇಕು. ಅದಕ್ಕೆ ತಾವು ಹೆಚ್ಚಿನ ಗಮನ ಕೊಡಬೇಕು. ವಾಸ್ತವ ಗಜಗರ್ಭದಿಂದ ಹೊರಗೆ ಬರಬಾರದು. ಮುಂದೆ ಇದೇನೂ ಗೊತ್ತಿಲ್ಲವೆಂದು ಹೇಳುವುದಕ್ಕೆ ಹೋಗಬಾರದು. ಆದ್ದರಿಂದ ಈಗ ಸರ್ಕಾರದವರು ಗೇಣಿ ರೈತರ ಬಗ್ಗೆ ಒಂದು ಸಮಗ್ರವಾದ ಭೂನುಧಾರಣೆಯನ್ನು ಜಾರಿಗೆ ತರುವುದರ ಮೂಲಕ ಮಣ್ಣಿನ ಮಕ್ಕಳ ಋಣವನ್ನು ತಾವು ತೀರಿಸಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

5-30 P.M.

ಅವರ ಹಿತರಕ್ಷಣೆಯಷ್ಟೇ ಪ್ರಾಮುಖ್ಯವಾದ ಆ ಸಣ್ಣ ಹಿಡುವಳೀದಾರರ ಹಿತವನ್ನೂ ಕೂಡ ತಾವು ರಕ್ಷಣೆ ಮಾಡಬೇಕು. ಅವರ ವಿನಾ ದೊಡ್ಡ ಭೂ ಮಾಲೀಕರ ಮತ್ತು ದೊಡ್ಡ ದೊಡ್ಡ ಬಂಡವಾಳಗಾರರ ಬಗ್ಗೆ ತಾವು ಮನಸೋಲಬಾರದು ಎಂಬುದು ನನ್ನ ವಾದದ ಮುಖ್ಯ ಗುರಿ. ಈಗಾಗಲೇ ನನ್ನ ಮಿತ್ರರಾದ ಶ್ರೀ ಕಾಗೋಡು ತಿಮ್ಮಪ್ಪನವರು ಹೇಳಿದಂತೆ ಕಾಂಗ್ರೆಸ್ಸಿನವರು ಕಳೆದ 20 ವರ್ಷಗಳಿಂದಲೂ ಸಮಾಜವಾದವನ್ನು ಜಾರಿಗೆ ತರುವುದರಲ್ಲೇ ಇದ್ದರೂ ಅವಿನ್ನೂ ಸಾಧ್ಯ ಆಗಿಲ್ಲ. ಆದರೆ ಈ ದಿವಸ ಹೆಸರಿಗೆ ಮಾತ್ರ ಕಾಂಗ್ರೆಸ್ ಎರಡಾಗಿದೆ ಎಂದು. ನನ್ನ ದೃಷ್ಟಿಯಲ್ಲಿ ಹೇಳುವುದಾದರೆ ಈ ಹೊಸ ಕಾಂಗ್ರೆಸ್ಸಿಗೂ ಮತ್ತು ಆ ಹಳೇ ಕಾಂಗ್ರೆಸ್ಸಿಗೂ ಇರತಕ್ಕ ವ್ಯತ್ಯಾಸ ಇಷ್ಟೆ: ಓಲ್ಡ್ ಕಾಂಗ್ರೆಸ್ ಈಕ್ವಲ್ಸ್ ನ್ಯೂ ಕಾಂಗ್ರೆಸ್ ಮೈನಸ್ ನಿಜಲಿಂಗಪ್ಪ ಅಷ್ಟೆ. ಹೊಸ ಕಾಂಗ್ರೆಸ್ಸಿನವರು ಇದನ್ನು ಕಾರ್ಯರೂಪದಲ್ಲಿ ಇಂದು ಮಾಡಿ ತೋರಿಸಬೇಕಾಗಿದೆ. ಇಲ್ಲವಾದರೆ ಕಾಂಗ್ರೆಸ್ ಎರಡಾಗಿದೆ ಎಂಬುದು ಬರೀ ಒಂದು ನಾಟಕವಾದೀತು. ಆದರೆ ನಮಗೇನೋ ತಾವು ಸಮಾಜವಾದವನ್ನು ಜಾರಿಗೆ ಶೀಘ್ರವಾಗಿ ತಂದೇತರುತ್ತೀರಿ ಎಂಬ ವಿಶ್ವಾಸವಿದೆ.

ಶ್ರೀ ಎಚ್. ಡಿ. ದೇವೇಗೌಡ.— ಇವರು ಮಾಡುವುದಕ್ಕೆ ತಯಾರಾಗಿದ್ದರೂ ಅದನ್ನು ಮಾಡಬೇಡಿ ಎಂದು ಶ್ರೀ ನಿಜಲಿಂಗಪ್ಪನವರು ತಡೆಹಿಡಿದ್ದರು ಈಗ ಮಾಡಿಬಿಡುತ್ತಾರೆ.

ಶ್ರೀ ಕೋಣಂದೂರು ಲಿಂಗಪ್ಪ.—ಅದೇನೇ ಇರಲಿ—ಅದು ನಿಮ್ಮ ನಿಮ್ಮ ವ್ಯಾಜ್ಯ. ಇನ್ನು ಮುಂದಕ್ಕಾದರೂ ಆ ಶ್ರೀಮಂತ ಊಳಿಗ ವರ್ಗದ ಹಿತಸಾಧನೆ ಮಾಡದೆ—ಜಗದ ಜನದ ಮನದ ಮಟ್ಟಕ್ಕೆ ದೂರವಾಗದ ರೀತಿಯಲ್ಲಿ ಮುಂದೆ ಆ ಬಿಲ್ಲನ್ನು ತನ್ನಿ ಎಂದು ಹೇಳಿ ನನ್ನ ಮಾತುಗಳನ್ನು ಮುಗಿಸುತ್ತೆನೆ.

†ಶ್ರೀ ಎನ್. ಹುಚ್ಚಮಾಸ್ತಿಗೌಡ.—ಮಾನ್ಯ ಅಧ್ಯಕ್ಷರೇ, ಶ್ರೀ ಕಕ್ಕೇರಾಯ ಅವರು ತಂದಿರತಕ್ಕ ತಿದ್ದುಪಡಿಯೇನಿದೆ ಅದರ ಬಗ್ಗೆ ಸರ್ಕಾರಕ್ಕೆ ಬಹಳ ಸಹಾನುಭೂತಿ ಇದೆ. ಆದರೆ ಈಗಿರತಕ್ಕ ಗೇಣೀ ಮಸೂದೆ ಅಂದರೆ ತಿದ್ದುಪಡೀ ಮಸೂದೆಯಲ್ಲಿ ಆಡಕವಾಗಿರತಕ್ಕ ಕಾನೂನು ಪ್ರಕಾರ ಗೇಣಿ ಕೊಡತಕ್ಕ ವಿಚಾರದಲ್ಲಿ ಆ ಭೂಮಿಯಲ್ಲಿ ಬೆಳೆಯುತಕ್ಕ ಮುಖ್ಯ ಬೆಳೆಯ ಸರಾಸರಿ ಬೆಳೆಯನ್ನು ಗೊತ್ತು ಮಾಡಿ ಆನಂತರ ಅದರ ಬೆಲೆ ಎಷ್ಟೆಂಬುದನ್ನು ನಿಗದಿ ಮಾಡಿ, ಅದನ್ನು ನೋಟಿಫೈ ಮಾಡಿ ಅದರ ಆಧಾರದ ಮೇಲೆ ಗೇಣಿಯನ್ನು ನಿರ್ಧರ ಮಾಡಬೇಕೆಂದು ಇದೆ. ಆದರೆ ಮಾನ್ಯ ಸದಸ್ಯರು ತಂದಿರತಕ್ಕ ತಿದ್ದುಪಡಿಯಲ್ಲಿ ಆ ಗೇಣಿ ಕಂದಾಯದ ಎಷ್ಟು ಪಟ್ಟು ಇರಬೇಕೆಂಬುದನ್ನು ಕಂಡು ಹಿಡಿದು ಅದರಂತೆ ನಿರ್ಧರಿಸಬೇಕೆಂದಿದೆ. ಆದರೆ ಇಂಥ ಒಂದು ತಿದ್ದುಪಡಿ ಈ ಸಭೆಯ ಮುಂದೆ ಸರ್ಕಾರ ಒಂದು ಸಮಗ್ರ ಭೂಸುಧಾರಣೆಯನ್ನು ಮುಂದೇನು ಮಂಡಿಸಲಿದೆ ಅದನ್ನು ಚರ್ಚೆ ಮಾಡತಕ್ಕ ಕಾಲದಲ್ಲಿ ಇದು ಮಂಡಿಸುವುದಕ್ಕೆ ಸೂಕ್ತವಾಗಿದೆಯೇ ಏನಾ ಸಧ್ಯದ ಪರಿಸ್ಥಿತಿಯಲ್ಲಿ ಇದು ಅಷ್ಟು ಸೂಕ್ತ ಕಾಣುವುದಿಲ್ಲ. ಅಲ್ಲದೆ ಸರ್ಕಾರದವರು ಹಾಲಿ ಮಂಡಿಸಿರತಕ್ಕ ತಿದ್ದುಪಡಿ ಮಸೂದೆಗೆ ಇದು ಅನುಗುಣವಾದುದಲ್ಲ. ಒಂದು ಸಮಗ್ರ ಭೂಸುಧಾರಣೆಯನ್ನು ತಂದಾಗ್ಗೆ ಇದು ಸೂಕ್ತವಾಗಿ ಕಾಣಬಹುದೇ ಏನಾ ಈಗ ಇದು ಸಕಾಲಿಕವಾಗಿಲ್ಲ. ಸರ್ಕಾರದವರು ಮಂಡಿಸಿರತಕ್ಕ ಈ ತಿದ್ದುಪಡಿ ಮಸೂದೆ ಸರಿಯಾಗಿದೆ ಎಂದು ಈಗಾಗಲೇ ಈ ಮಾನ್ಯ ಸಭೆಯವರೆಲ್ಲರೂ ಒಪ್ಪಿದ್ದಾರೆ. ಅದರಂತೆ ಈಗ ಗೇಣಿಯನ್ನು ಕೊಡಬೇಕೇ ಏನಾ ಅದನ್ನು ಮತ್ತೆ ಬದಲಾವಣೆ ಮಾಡುವುದಕ್ಕಾಗುವುದಿಲ್ಲ. ಇನ್ನೂ ಒಂದು ವಿಚಾರ ಹೇಳಬೇಕೆಂದರೆ ಮಾನ್ಯ ಸದಸ್ಯರ ತಿದ್ದುಪಡಿಯಲ್ಲಿ 2 ವರ್ಷದ ಗೇಣಿಯನ್ನು ಕೊಟ್ಟ ಮೇಲೆ ಬಾಕಿ ಉಳಿಯತಕ್ಕ ಗೇಣಿಯನ್ನು ಕೊಡಬೇಕಾದ್ದೇ ಇಲ್ಲ ಎಂಬ ಅರ್ಥ ಕೂಡ ಅದರಲ್ಲಿದೆ. ಸರ್ಕಾರ ತಿದ್ದುಪಡಿ ಇರತಕ್ಕದ್ದು ಸಧ್ಯದಲ್ಲಿ ಗೇಣಿದಾರನು ಎರಡು ವರ್ಷದ ಗೇಣಿಯನ್ನು ಕೊಟ್ಟರೆ ಭೂಮಾಲೀಕರು ಅವನನ್ನು ಹೊರಗೆ ಹಾಕಕೂಡದು ಎಂಬುದಾಗಿದೆ. ಆದ್ದರಿಂದ ಇವು ಒಂದಕ್ಕೊಂದಕ್ಕೆ ವಿರೋಧವಾಗಿವೆ. ಇದರಿಂದ ಸಣ್ಣ ಹಿಡುವಳಿದಾರರೇನಿದ್ದಾರೆ ಅವರಿಗೆ ಬಹಳ ತೊಂದರೆಯಾಗುತ್ತದೆ. ಇದನ್ನು ಸರ್ಕಾರದವರು ಕಡೆಗಾಣಿಸುವುದಕ್ಕಾಗುವುದಿಲ್ಲ. ಆದ್ದರಿಂದ ಮಾನ್ಯ ಸದಸ್ಯರು ಗೇಣಿದಾರರ ಹಿತದೃಷ್ಟಿಯಿಂದಲೂ ಮತ್ತು ಸಣ್ಣ ಹಿಡುವಳಿದಾರರ ಹಿತದೃಷ್ಟಿಯಿಂದಲೂ ತಮ್ಮ ತಿದ್ದುಪಡಿಗಳನ್ನು ದಯವಿಟ್ಟು ವಾಪಸ್ಸು ತೆಗೆದುಕೊಳ್ಳಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಬಿ. ವಿ. ಕಕ್ಕೇರಾಯ.—ಅಧ್ಯಕ್ಷರೇ ನನ್ನ ತಿದ್ದುಪಡಿಯ ಬಗ್ಗೆ ಎರಡು ಮಾತುಗಳನ್ನು ಹೇಳಬೇಕಾಗಿದೆ. ಶ್ರೀ ಟಿ. ಶಾಮಣ್ಣನವರು ಸಭೆಯಲ್ಲಿ ಇಲ್ಲ. ಅವರು ನಮ್ಮ ತಿದ್ದುಪಡಿಯನ್ನು ಈಗತಾನೇ ರಪ್ಪಾಯಿಂದ ಏನೋ ಕಂತೆ ತಂದು ಈ ಸಭೆಯಲ್ಲಿ ಬಿಚ್ಚಿದಂತೆ ಚಿತ್ರಿಸಿ ಮಾತನಾಡಿದರು. ಅದು ಅವರ ಮನೋಧರ್ಮ. ಅವರು ಚೆನ್ನಾಗಿ ಶಾಸ್ತ್ರಾಭ್ಯಾಸವನ್ನು ಮಾಡಿದವರು. ಭೂಮಿ ಹಿಂದೆ ಯಾವತ್ತೂ ಸ್ವಂತ ಸ್ವತ್ತಾಗಿ ಇರಲಿಲ್ಲ. ಮನು ತನ್ನ ಧರ್ಮ ಶಾಸ್ತ್ರವನ್ನು ಬರೆಯುವುದಕ್ಕೆ ಮೊದಲು ಈ ಭೂಮಿ ಎಲ್ಲರ ಸ್ವತ್ತಾಗಿತ್ತು. ಭೂಮಿಯನ್ನು ಯಾರಿಗಾದರೂ ದಾನ ಕೊಡಬೇಕಾದ್ದರೆ ಆ ಗ್ರಾಮದಲ್ಲಿರತಕ್ಕ ಎಲ್ಲಾ ಜನರ ಒಪ್ಪಿಗೆಯನ್ನೂ ಪಡೆಯಬೇಕಾಗಿತ್ತು. ಆದರೆ ಅಂಥ ಭೂಮಿ ಈ ದಿವಸ ಕೆಲವೇ ಕೆಲವರ ಸ್ವತ್ತಾಗಿದೆ. ಇದನ್ನು ತಪ್ಪಿಸಬೇಕು ಎನ್ನುವುದು ನಮ್ಮ ವಾದ ಅಷ್ಟೇ. ಮಾನ್ಯ ಸಚಿವರು ಹೇಳಿದಂತೆ ಗೇಣಿದಾರರ ಹಾಗೂ ಸಣ್ಣ ಹಿಡುವಳಿದಾರರ ವಿಚಾರದಲ್ಲಿ ಎಲ್ಲರಿಗೂ ಸಹಾನುಭೂತಿ ಇರಬೇಕಾದ್ದು ಅತ್ಯಗತ್ಯ. ಆದರೆ ಜಮೀನು ತನ್ನಷ್ಟಕ್ಕೆ ತಾನು ಏನನ್ನೂ ಉತ್ಪತ್ತಿ ಮಾಡಲಾರದು. ಒಬ್ಬ ಮನುಷ್ಯ ಒಂದು ಲಕ್ಷ ರೂಪಾಯಿ ಖರ್ಚು ಮಾಡಿ ಒಂದು ಭೂಮಿಯನ್ನು ಕೊಂಡಾಗ್ಗೂ ಅವನು ಅದಕ್ಕೆ ಊದುಗಡ್ಡಿ, ಕರ್ಪೂರಗಳನ್ನಿಟ್ಟು, ಪೂಜೆ ಮಾಡಿ ಬರುವ ಮುಂಗಾರಿಯಲ್ಲಿ ನನಗೆ 100 ಪಲ್ಲ ಜೋಳ ಬರುವಂತೆ ಮಾಡು ಭೂಮಿತಾಯಿ ಎಂದರೆ ಅವನಿಗೆ ಆ ಜೋಳ ಬರುವುದಿಲ್ಲ. ಯಾರಾದರೊಬ್ಬ ರೈತ ಬೆವರನ್ನು ಸುರಿಸಿ ಬೆಳೆದರೇನೇ ಅಲ್ಲಿ ಉತ್ಪತ್ತಿ ಬರುವುದು. ಅಂಥಾ ರೈತರಿಗೆ ಭೂಮಿಯಲ್ಲಿ ಬೆಳೆ ತೆಗೆಯಬೇಕಾಗಿದ್ದರೆ ಅವನಿಗೆ ಆಗತಕ್ಕ ಉಳುಮೆ ಖರ್ಚು ಎಷ್ಟು, ಅದಕ್ಕೆ ಹಾಕಬೇಕಾದ ಸೀಮೆ ಗೊಬ್ಬರದ ಖರ್ಚೇನು, ಅಲ್ಲಿ ಕೂಲಿ ಮಾಡತಕ್ಕ ಜನರಿಗೆ ಕೊಡಬೇಕಾದ ಕೂಲಿ ವಗೈರೆ ಖರ್ಚೆಷ್ಟು ಮತ್ತು ಅವನ ಎತ್ತು ಕರುಗಳ ವೆಚ್ಚವೇನು ಇವುಗಳನ್ನೆಲ್ಲಾ ಲೆಕ್ಕ ಹಾಕಿದರೆ ಅವನಿಗೆ ಏನಾದರೂ ಉಳಿಯುತ್ತದೆಯೇ ಎಂದರೆ ಅವನ ಕೂಲಿ ಮಾತ್ರ ಅವನಿಗೆ ಉಳಿಯಬಹುದೇ ಹೊರತು ಅವನಿಗೆ ಇದರಲ್ಲಿ ಖಂಡಿತ ಲಾಭ ಬರತಕ್ಕ ಪ್ರಶ್ನೆಯೇ ಇಲ್ಲ. ಈ ದಿವಸ ಸ್ವಂತ ಜಮೀನಿನವರಿಗೆ, ಸಣ್ಣ ಹಿಡುವಳಿ ಇರುವವರಿಗೆ ಅವರು ಒಂದೆರಡು ಎಳನಿಟ್ಟು ವ್ಯವಸಾಯ ಮಾಡುತ್ತಿದ್ದರೆ, ಅವರಿಗೆ ಇದರ ಸಂಪೂರ್ಣ ಅನುಭವವಿರುವದು. ಇದರಿಂದ ಬರುವ ಉತ್ಪತ್ತಿಯಿಂದ ಸೊಸೈಟಿ ಅಥವ ಬ್ಯಾಂಕುಗಳಲ್ಲಿ ಅವರು ಮಾಡಿರುವ ಸಾಲಕ್ಕೆ ಬಡ್ಡಿ ಕೂಡ ಕೊಡಲು ಸಾಧ್ಯವಾಗುವುದಿಲ್ಲ. ಹಾಗಿರುವಾಗ ರೈತ ಯಾವರೀತಿ ಗೇಣಿ ಕೊಡಬೇಕು

ಎಂಬುದನ್ನು ಯೋಚನೆಮಾಡಬೇಕು. ಸೊಸೈಟಿ ಸಾಲ ಪಡೆದು ಗೇಣಿ ಕೊಡುವರು. ಬೆಳೆಯಿಂದ ಬರುವ ಆದಾಯದಲ್ಲಿ ಗೇಣಿ ಕೊಡಲು ರೈತರಿಗೆ ಏನೂ ಉಳಿಯುವುದಿಲ್ಲ. ಇಂಥ ಪರಿಸ್ಥಿತಿ ಇರುವುದರಿಂದ ರೈತರಿಗೆ ಅನುಕೂಲವಾಗಲೆಂದು ಈ ತಿದ್ದುಪಡಿ ತರಲಾಗಿದೆ, ಇದನ್ನು ಒಪ್ಪಿಕೊಳ್ಳಬೇಕು. ರೈತರು ಏನಾದರೂ ಉಳಿದರೆ ತಾನೆ ಜಮೀನುದಾರರಿಗೆ ಕೊಡಬಹುದು ? ಇಂದು ಗೇಣಿ ಕೊಡಲು ರೈತರಿಗೆ ಸಾಧ್ಯವಿಲ್ಲ ಆದುದರಿಂದ ಈ ತಿದ್ದುಪಡಿಯನ್ನು ಒಪ್ಪಿಕೊಳ್ಳಬೇಕು, ಹಿಂದಕ್ಕೆ ತೆಗೆದು ಕೊಳ್ಳುವುದಿಲ್ಲ ಎಂದು ಹೇಳುತ್ತೇನೆ.

**MADAM SPEAKER.**—I will now put the amendments to the vote of the House.

The question is :

"That at page 3, Clause 4, line 6 for the words "if the tenant pays to the landlord an amount equal to the rent due for a period of two years" the words "If the tenant pays to the landlord an amount equal to ten times the land revenue of the land" shall be substituted".

AND

"That at page 3 at the end of Clause 4, the words "and the amount so paid shall be deemed to be in full discharge of the entire amount decreed or ordered by the Court or Tribunal', shall be added".

*The amendments were negatived.*

**MADAM SPEAKER.**—I will put Clause 4 to the vote of the House.

The question is :

"That clause 4 do stand part of the Bill."

*The motion was adopted.*

Clause 4 was added to the Bill."

CLAUSE. 5

**MADAM SPEAKER.**—The question is :

"That clause 5 do stand part of the Bill."

*The motion was adopted.*

Clause 5 was added to the Bill.

CLAUSE 1 etc.

**MADAM SPEAKER.**—The question is :

"That clause 1, the long Title and the enacting formula do stand part of the Bill.

*The motion was adopted.*

Clause 1, the long Title and the enacting formula were added to the Bill."

*Motion to pass.*

Sri N. HUTCHAMASTHY GOWDA.—I big to move :

"That the Mysore Land Reforms (Second Amendment and Miscellaneous Provisions) Bill, 1972, be passed."

MADAM SPEAKER.—The question is :

"That the Mysore Land Reforms (Second Amendment and Miscellaneous Provisions) Bill, 1972, be passed."

*The motion was adopted.*

## Mysore (Bombay and Hyderabad Areas) Religious and Charitable Inams Abolition Bill, 1972—*Motion to consider.*

MADAM SPEAKER.—Before taking up the next Bill, I would like to announce to the House that the Governor of Mysore has recommended the consideration of the Mysore (Bombay and Hyderabad Areas) Religious and Charitable Inams Abolition Bill, 1972, in pursuance of Clause 3 of article 207 of the Constitution. The Hon'ble Minister for Revenue may move a motion for the consideration of the Bill.

Sri N. HUTCHAMASTHY GOWDA (Minister for Revenue)—Madam, I beg to move :

"That the Mysore (Bombay and Hyderabad Areas) Religious and Charitable Inams Abolition Bill, 1972 be taken into consideration."

This Bill has been published in the Mysore Gazette under Rule 64 of the Rules of Proceedure and Conduct of Business in the Mysore Legislative Assembly.

MADAM SPEAKER.—Motion moved.

"That the Mysore (Bombay and Hyderabad Areas) Religious and Charitable Inams Abolition Bill, 1972, be taken into consideration."

Sri C. M. ARUMUGAM.—We shall take up this Bill for discussion tomorrow as we are at the fag end of the day and it may not be possible to complete this Bill. We need not sit exactly till 6 of the clock.

Sri H. D. DEVEGOWDA.—If the Hon'ble Revenue Minister wants to say anything in support of the Bill, let him make a speech.

† ಶ್ರೀ ಎನ್. ಹುಚ್ಚಮಾಸ್ತಿಗೌಡ.—ಅಧ್ಯಕ್ಷರೇ, ನಮ್ಮ ಮುಂದಿರುವ ಈ ಮಸೂದಾ ಕಾನೂನಿನ ಉದ್ದೇಶ ಈಗಿರುವ ರೀತಿಯಲ್ಲಿ ಮೈಸೂರು ರಾಜ್ಯದಲ್ಲಿ ಈಗಾಗಲೇ ಮೈಸೂರು ರಿಲಿಜಿಯಸ್ ಅಂಡ್ ಚಾರಿಟ್‌ಬಲ್ ಇನಾಮ್ಸ್ ಅಬಾಲಿಷನ್ ಆಕ್ಟ್ 1955 ಜಾರಿಯಲ್ಲಿದೆ. ಈ ಕಾನೂನಿನ ಪ್ರಕಾರವಾಗಿ ದೇವಸ್ಥಾನಗಳಿಗೆ ಮತ್ತು ಮತೀಯ ಸಂಬಂಧವಾದ ಸಂಸ್ಥೆಗಳಿಗೆ ಸೇರಿದ ಇನಾಂ ಗ್ರಾಮಗಳಲ್ಲಿ ಬೇಕಾಗಿರುವುದನ್ನು ಈಗಾಗಲೇ ಸರಕಾರ ಸ್ವಾಧೀನಕ್ಕೆ ತೆಗೆದು